

## ಸಿದ್ದಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

# ಧಾರ್ಮಿಕ ಆಕ್ಷೇಪಾರ್ಹ ನಡತೆ

ಉತ್ತರ ಪ್ರದೇಶದ ಯತಿ ನರಸಿಂಹಾನಂದ ಮಹಾರಾಜ್ ಪ್ರವಾದಿ ಮಹಮದ್ ರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವರೆಂದು ಮಹಾರಾಷ್ಟ್ರ ಕರ್ನಾಟಕಗಳಲ್ಲಿ ದೂರು ದಾಖಲಾಗಿವೆ. ಪರ ವಿರೋಧ ಪ್ರತಿಭಟನೆ ನಡೆದಿವೆ. ಅವರವರ ಧರ್ಮದವರಿಗೆ ಅವರವರ ಧರ್ಮ – ಧರ್ಮಗುರುಗಳ ಬಗ್ಗೆ ಹೆಚ್ಚು ಶ್ರದ್ಧಾಭಕ್ತಿ. ಅವರವರು ಅವರವರ ಧರ್ಮ ಪಾಲಿಸಲಿ. ಬೇರೆಯವರ ಧರ್ಮವನ್ನೂ ಗೌರವಿಸಲಿ. ಧೂಮಪಾನಿ ಧೂಮಪಾನಿಯಲ್ಲದವನ ಪಕ್ಕ ಕುಳಿತು ಧೂಮಪಾನ ಮಾಡಿ ನನ್ನ ಹಕ್ಕು ಧರ್ಮ ಎನ್ನುವುದು ತಪ್ಪು. ನಮ್ಮ ಧರ್ಮಾಚರಣೆ ಸಾತ್ತ್ವಿಕರಿಗೆ ತೊಂದರೆಯಾಗದಂತಿರಲಿ.
ವ್ಯಕ್ತಿಯ ಅಪಕ್ವ ಮನೋಭಾವ ನಿರ್ಧಾರಗಳು ಧರ್ಮಕ್ಕೆ ನುಸುಳಿ ಸೇರದಿರಲಿ. ಧಾರ್ಮಿಕ ಅಪಕ್ವ ನಿಲುವುಗಳನ್ನು ತಿದ್ದಿಕೊಳ್ಳುವ ವಿಶಾಲತೆ ಎಲ್ಲಾ ಧರ್ಮದವರಿಗಿರಲಿ. ಈ ವಿಶಾಲತೆ ಇದ್ದಿದ್ದರೆ ಬಲವಂತದ ಮತಾಂತರ ಮುಂತಾದ್ದು ನಡೆಯುತ್ತಿರಲಿಲ್ಲ. ಹಿಂದುದೇವಾಲಯ ವಿಗ್ರಹಗಳನ್ನು ಒಡೆಯುತ್ತಿರಲಿಲ್ಲ. ನಳಂದ ವಿಶ್ವವಿದ್ಯಾಲಯದ ಗ್ರಂಥಗಳನ್ನು ಸುಡುತ್ತಿರಲಿಲ್ಲ. ಅಲ್ಪಸಂಖ್ಯಾತರಾಗಿದ್ದು ಭಾರತವನ್ನು ಇಸ್ಲಾಮೀಕರಣ ಮಾಡುವೆವೆಂದು ಹೇಳುತ್ತಿರಲಿಲ್ಲ. ಭಾರತದ ರಾಷ್ಟ್ರಧ್ವಜವನ್ನು ಇಸ್ಲಾಮೀಕರಿಸಿ ಹಾರಿಸುತ್ತಿರಲಿಲ್ಲ. ದೇಶದಲ್ಲಿದ್ದು ಅನ್ಯದೇಶದ ಘೋಷಣೆ ಧ್ವಜ ಪ್ರದರ್ಶನ ನಡೆಯುತ್ತಿರಲಿಲ್ಲ. ಧರ್ಮದ ಹೆಸರಿನಲ್ಲಿ ಇಂಥ ಕೃತ್ಯ ಎಸಗುವವರು ಆ ಧರ್ಮವನ್ನು ತಿಳಿದವರಲ್ಲ. ಧರ್ಮ ಬೋಧಿಸಿದವರು ಮಾನವ ಪ್ರಾಣಿ ಪ್ರಕೃತಿಯನ್ನು ಪ್ರೀತಿಸಿದರು. ಆ ಜಾತಿಯಲ್ಲಿ ಹುಟ್ಟಿ ಆ ಧರ್ಮದವರೆನಿಸಿ ಧರ್ಮವರಿಯದೇ ಪುಂಡಾಟಿಕೆ ತೋರಿ ಧಾರ್ಮಿಕ ದ್ವೇಷ ಬಿತ್ತುತ್ತೇವೆ. ತುಂಬಿದ ಕೊಡ ತುಳುಕುವುದಿಲ್ಲ.

# ದಾಸವಾಣಿ ಕಾರ್ಯಕ್ರಮ

• ಉದಯವಾಹಿನಿ ಬೆಂಗಳೂರು



ಮಲ್ಲೇಶ್ವರದ 18ನೇ ಅಡ್ಡರಸ್ತೆಯಲ್ಲಿರುವ ಶ್ರೀ ಸರ್ಕಲ್ ಮಾರಮ್ಮ ದೇವಸ್ಥಾನದಲ್ಲಿ ದಸರಾ ಮಹೋತ್ಸವದ ಪ್ರಯುಕ್ತ ಅಕ್ಟೋಬರ್ 8, ಮಂಗಳವಾರ ಸಂಜೆ 6–30ಕ್ಕೆ ಶ್ರೀಮತಿ ರೂಪಾ ಪ್ರಭಂಜನ ಮತ್ತು ಸಂಗಡಿಗರಿಂದ ದಾಸವಾಣಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸ್ಥಳ : ಶ್ರೀ ಸರ್ಕಲ್ ಮಾರಮ್ಮ ದೇವಸ್ಥಾನ, ಭಾರತೀಯ ವಿಜ್ಞಾನ ಮಂದಿರದ ಪಕ್ಕ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

# ಬಳೆ ಅಂಗಡಿಗೆ ಬರುವ ಯುವತಿಯರೊಂದಿಗೆ ಅಸಭ್ಯ ವರ್ತನೆ

• ಉದಯವಾಹಿನಿ ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ ರಕ್ಷಣೆಯೇ ಇಲ್ಲ ಎಂಬಂತಾಗಿದೆ. ಅದರಲ್ಲೂ ಸಿಲಿಕಾನ್ ಸಿಟಿ ಬೆಂಗಳೂರಲ್ಲಿ ದಿನದಿಂದ ದಿನಕ್ಕೆ ಲೈಂಗಿಕ ದೌರ್ಜನ್ಯ ಕೇಸ್ ಗಳು ಹೆಚ್ಚಾಗ್ತಿದೆ. ಬೆಂಗಳೂರಿನ ವೈಟ್ ಫೀಲ್ಡ್ ಬಳಿಯ ಕಾಡುಗೋಡಿಯಲ್ಲಿ ಫ್ಯಾನ್ಸಿ ಸ್ಟೋರಿನ ಮಾಲೀಕ ಅಂಗಡಿಗೆ ಬರುವ ಗ್ರಾಹಕ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ. ಇದ್ರಿಂದ ತೀವ್ರ ಮುಜುಗರಕ್ಕೀಡಾದ ಮಹಿಳೆಯರು ಸ್ಥಳೀಯ ಮುಖಂಡರ ಗಮನಕ್ಕೆ ತಂದಿದ್ದಾರೆ. ಫ್ಯಾನ್ಸಿ ಸ್ಟೋರ್‌ಗೆ ಬರುವ ಹೆಣ್ಣು ಮಕ್ಕಳಿಗೆ ಗುಪ್ತಾಂಗ ತೋರಿಸಿ ಅಸಭ್ಯ ರೀತಿ ವರ್ತಿಸಿದ್ದಾನೆ ಎಂಬ ಆರೋಪ ಕೇಳಿಬರ್ತಿದೆ. ಸಾಕಷ್ಟು ದೂರುಗಳು ಕೇಳಿಬಂದ ಹಿನ್ನಲೆ ಸ್ಥಳೀಯ ಮುಖಂಡರು ಭೇಟಿ ಅಂಗಡಿ ಬಳಿ ತೆರಳಿ ಮಾಲೀಕನನ್ನ ತರಾಟೆಗೆ ತೆಗೆದುಕೊಂಡಿದ್ದಾರೆ. ಅಲ್ಲದೆ ವಿಡಿಯೋ ಮಾಡಿ ಬೈದು ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಮೂಲತಃ ಈತ ಕರ್ನಾಟಕದವರಲ್ಲ. ಬೇರೆಡೆಯಿಂದ ಬಂದು ಇಲ್ಲಿ ಫ್ಯಾನ್ಸಿ ಸ್ಟೋರ್ ಇಟ್ಟುಕೊಂಡಿದ್ದನು ಎನ್ನಲಾಗುತ್ತಿದೆ. ಸೋಷಿಯಲ್ ಮೀಡಿಯಾದಲ್ಲಿ ವಿಡಿಯೋ ಪೋಸ್ಟ್ ಆಗಿದ್ದು, ವಲಸಿಗರ ಕಾಟ ಹೆಚ್ಚಾಗಿದೆ ಎಂಬ ಕಮೆಂಟ್ಸ್ ಸಿಕ್ಕಾಪಟ್ಟೆ ಸದ್ದು ಮಾಡುತ್ತಿದೆ.

# ಕೆರೆಗೆ ಆರ್‌ಸಿಬಿಯಿಂದ ಮರುಜೀವ

• ಉದಯವಾಹಿನಿ ಬೆಂಗಳೂರು

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಆರ್ ಸಿಬಿ ತನ್ನ ಗೋ ಗ್ರೀನ್ ಅಭಿಯಾನದ ಮೂಲಕ ಮತ್ತೊಮ್ಮೆ ಕನ್ನಡಿಗರ ಮನಸನ್ನು ಗೆದ್ದಿದ್ದು, ನಗರದ ಎರಡು ಕೆರೆಗಳಿಗೆ ಪುನಶ್ಚೇತನ ಮಾಡಿ ಸ್ಥಳೀಯರಿಗೆ ಹಸ್ತಾಂತರಿಸಿದೆ. ಗೋ ಗ್ರೀನ್ ಯೋಜನೆಯಡಿ ಆರ್ ಸಿ ಬಿ ಬೆಂಗಳೂರಿನ ಇಟ್ಟಗಲ್ ಪುರ ಮತ್ತು ಸಂಡೇನಹಳ್ಳಿ ಕೆರೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಿದೆ. ಇಂಡಿಯಾ ಕೇರ್ಸ್ ಫೌಂಡೇಷನ್ ಮತ್ತು ಫ್ರೆಂಡ್ಸ್ ಆಫ್ ಲೇಕ್ಸ್ ಜೊತೆಗೂಡಿ ಆರ್‌ಸಿಬಿ ಈ ಕೆರೆಗಳನ್ನು ಅಭಿವೃದ್ಧಿಪಡಿಸಿದೆ. ಸ್ಥಳೀಯರ ನೀರಿನ ಸಮಸ್ಯೆ ಹಾಗೂ ನೀರಿನ ರಕ್ಷಣೆ ಉದ್ದೇಶದಿಂದ ಎರಡು ಕೆರೆಗಳನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಆರ್‌ಸಿಬಿ 2023ರಲ್ಲಿ ಕೈಗೆತ್ತಿಕೊಂಡಿತ್ತು. ಇದೀಗ ಯಶಸ್ವಿಯಾಗಿ ಕೆರೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಸ್ಥಳೀಯರಿಗೆ ನೀಡಲಾಗಿದೆ ಎಂದು ಆರ್‌ಸಿಬಿ ಉಪಾಧ್ಯಕ್ಷ ರಾಜೇಶ್ ಮೆನನ್ ತಿಳಿಸಿದ್ದಾರೆ. 2011 ರಿಂದ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಆರ್‌ಸಿಬಿ ತಮ್ಮ ಗೋ ಗ್ರೀನ್ ಅಭಿಯಾನದಲ್ಲಿ ತೊಡಗಿಕೊಂಡಿತ್ತು. ಇದೇ ಕಾರಣಕ್ಕೆ ಪ್ರತಿ ಆವೃತ್ತಿಯಲ್ಲಿಯೂ ಒಂದು ಪಂದ್ಯವನ್ನು ಹಸಿರು ಜೆರ್ಸಿಯಲ್ಲಿ ಆಡುತ್ತಿದೆ.

# ಅಫಿಡವಿಟ್‌ನಲ್ಲಿ ಸುಳ್ಳು ಮಾಹಿತಿ – ಕಾಂಗ್ರೆಸ್ ಶಾಸಕ ಹ್ಯಾರಿಸ್‌ಗೆ ಅನರ್ಹತೆ ಭೀತಿ!

• ಉದಯವಾಹಿನಿ ಬೆಂಗಳೂರು

ಶಾಂತಿನಗರ ಶಾಸಕ ಎನ್. ಎ ಹ್ಯಾರಿಸ್ ಗೆ ಅನರ್ಹತೆ ಭೀತಿ ಎದುರಾಗಿದೆ. 2023 ರ ಚುನಾವಣೆ ವೇಳೆ ಆಯೋಗಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಸುಳ್ಳು ಮಾಹಿತಿ ನೀಡಲಾಗಿದೆ ಪರಾಜಿತ ಅಭ್ಯರ್ಥಿ ಕೇಸ್ ದಾಖಲಿಸಿದ್ದರು.ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಾಲಯ ಅ.8ರೊಳಗೆ ಸೂಕ್ತ ಸಾಕ್ಷ್ಯ ಒದಗಿಸುವಂತೆ ಸೂಚನೆ ಕೊಟ್ಟಿದೆ . ಹ್ಯಾರಿಸ್ ಪ್ರಕರಣದ ಇತ್ಯಾರ್ಥಕ್ಕೆ ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ್ದರು. ಹೈ ಕೋರ್ಟ್‌ನಲ್ಲೇ ಇತ್ಯಾರ್ಥ ಮಾಡಿಕೊಳ್ಳುವಂತೆ ಸುಪ್ರೀಂ ಸೂಚಿಸಿದೆ. ಇದ್ರಿಂದಾಗಿ ನಲಪಾಡ್‌ಗೆ ಅನರ್ಹತೆ ಭೀತಿ ಎದುರಾಗಿದೆ. ಇದೇ ವಿಚಾರವಾಗಿ ಬಿಜೆಪಿ ಟ್ವೀಟ್ ಮಾಡಿ ಟಾಂಗ್ ನೀಡಿದೆ. ಚುನಾವಣಾ ಆಯೋಗ ಸೇರಿದಂತೆ ಜನತೆಯ ಕಣ್ಣಿಗೆ ಮಂಕುಬೂದಿ ಎರಚುವುದರಲ್ಲಿ ಕಾಂಗ್ರೆಸ್ಸಿಗರು ಸಿದ್ಧಹಸ್ತರು ಶಾಂತಿನಗರ ಕಾಂಗ್ರೆಸ್ ಶಾಸಕ ಹ್ಯಾರಿಸ್ ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿರುವುದು ನಿಜಕ್ಕೂ ಅಪರಾಧ.ಅವರನ್ನು ಕೂಡಲೇ ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಆಗ್ರಹಿಸಿದೆ

# ಅಪಾರ್ಟ್‌ಮೆಂಟ್ ನಿವಾಸಿಗಳನ್ನ ಟ್ರ್ಯಾಕ್ಟರ್‌ನಲ್ಲಿ ಡ್ರಾಪ್ ಮಾಡಿಸಿದ ಮಳೆರಾಯ!

• ಉದಯವಾಹಿನಿ ಬೆಂಗಳೂರು

ಬೆಂಗಳೂರಿನಲ್ಲಿ ನಿನ್ನೆ ರಾತ್ರಿಯಿಡೀ ಭಾರಿ ಮಳೆ ಸುರಿದು ದೊಡ್ಡ ಅವಾಂತರವನ್ನೇ ಸೃಷ್ಟಿಸಿದೆ. ನಗರದಾದ್ಯಂತ ವರುಣಾರ್ಭಟಕ್ಕೆ ನಿವಾಸಿಗಳು ನಲುಗಿದ್ದು, ಅಪಾರ್ಟ್‌ಮೆಂಟ್ ನಿವಾಸಿಗಳು ಬಯಸಿದ್ದ ಲೇಕ್‌ವ್ಯೂ ಬೆಳಗಾಗು ವಷ್ಟರಲ್ಲಿ ತನ್ನ ಬಾಗಿಲ ಮುಂದೆಯೇ ಪ್ರತ್ಯಕ್ಷವಾಗಿದೆ. ಧಾರಾಕಾರ ಮಳೆಯಿಂದಾಗಿ ಹಲವು ಮನೆಗಳಿಗೆ ನೀರು ನುಗ್ಗಿದ್ದು, ಅಪಾರ್ಟ್‌ಮೆಂಟ್ ಬೇಸ್‌ಮೆಂಟ್‌ಗಳು ಜಲಾವೃತಗೊಂಡಿವೆ. ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದ ವಾಹನಗಳೆಲ್ಲ ಮುಳುಗಡೆಯಾಗಿವೆ. ಹಲವು ಅಪಾರ್ಟ್‌ಮೆಂಟ್‌ಗಳು ಕೆರೆಗಳ ಆಸುಪಾಸಿನಲ್ಲೇ ಇರುವುದರಿಂದ ಇದನ್ನು ಲೇಕ್‌ವ್ಯೂ ಹೆಸರಲ್ಲಿ ಗ್ರಾಹಕರನ್ನು ಸೆಳೆಯುತ್ತಾರೆ. ಇದನ್ನು ಆಸೆಪಟ್ಟು ಅಪಾರ್ಟ್‌ಮೆಂಟ್ ಖರೀದಿಸಿದವರಿಗೆ ಮಳೆ ಆಗಾಗ ಸುನಾಮಿಯ ಫೀಲ್ ಅನ್ನೇ ತರಿಸುತ್ತಿದೆ. ಬಾಲ್ಕನಿಯಿಂದ ನಿಂತಾಗ ಕಾಣುತ್ತಿದ್ದ ಲೇಕ್‌ವ್ಯೂ ಈಗ ಮಳೆ ಬಂದರೆ, ಮನೆಬಾಗಿಲಿನವರೆಗೆ ಬರುತ್ತಿದೆ.

# ಬೆಂಗಳೂರು ಕಚಡಾ ರೋಡ್‌ಗೆ 1ಕೋಟಿ ರೂ. ತೆರಿಗೆ ಕೊಡ್ಬೇಕಾ

## ಕೆ.ಆರ್ ಪುರ ಸೇರಿದಂತೆ ವಿವಿಧ ಭಾಗದಲ್ಲಿ ರಸ್ತೆಗಳಲ್ಲಿ ಇನ್ನೂ ನೀರು ನಿಂತಿದ್ದು, ವಾಹನ ಸವಾರರು ಪರದಾಡುತ್ತಿದ್ದಾರೆ

• ಉದಯವಾಹಿನಿ ಬೆಂಗಳೂರು

ಮಳೆಯಿಂದ ಭಾರೀ ಅವಾಂತರ ಸೃಷ್ಟಿಯಾಗಿದೆ. ಎಷ್ಟರ ಮಟ್ಟಿಗೆ ಎಂದರೆ ಬೆಂಗಳೂರಿನ ಹೊರವಲಯ, ಮಹದೇವಪುರ ಹಾಗೂ ಕೆ.ಆರ್ ಪುರ ಸೇರಿದಂತೆ ವಿವಿಧ ಭಾಗದಲ್ಲಿ ರಸ್ತೆಗಳಲ್ಲಿ ಇನ್ನೂ ನೀರು ನಿಂತಿದ್ದು, ವಾಹನ ಸವಾರರು ಪರದಾಡುತ್ತಿದ್ದಾರೆ. ರಸ್ತೆಗಳಲ್ಲಿ ಮಂಡಿಯ ವರೆಗೆ ನೀರು ನಿಲ್ಲುತ್ತಿದ್ದು, ಜನ ಹೈರಾಣಾಗಿದ್ದಾರೆ. ನಾವು ಇಲ್ಲಿ ಒಂದು ಕೋಟಿ ರೂಪಾಯಿ ಬಿಬಿಎಂಪಿ, ಸರ್ಕಾರಕ್ಕೆ ತೆರಿಗೆ ಕಟ್ತೀವಿ.. ಆದರೂ ಈ ಅಧ್ವಾನ ನಾವ್ಯಾಕ್ರಿ ತೆರಿಗೆ ಕಟ್ಬೇಕು ಅಂತ ಜನ ಪ್ರಶ್ನೆ ಮಾಡ್ತಿದ್ದಾರೆ.

ಬೆಂಗಳೂರಿನಲ್ಲಿ ರಾತ್ರಿ ಧಾರಾಕಾರ ಮಳೆಯಾಗಿದೆ. ಕೆಲವು ಕಡೆ ಸಾಧಾರಣ ಮಳೆಯಾಗಿದ್ದರೂ, ಭಾರೀ ಪ್ರಮಾಣದಲ್ಲಿ ಅನಾಹುತ ಸಂಭವಿಸಿದೆ. ಮಹದೇವಪುರದಲ್ಲಿ ಹಲವು ರಸ್ತೆಗಳು ಜಲಾವೃತವಾಗಿದ್ದು, ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರಮುಖ ರಸ್ತೆಗಳಲ್ಲಿ ನೀರು ನಿಂತಿದ್ದು ವಾಹನ ಸವಾರರು ರಸ್ತೆಗಳಲ್ಲಿ ಬೀಳುತ್ತಿದ್ದಾರೆ. ಇದೀಗ ಮಹದೇವಪುರದ ಬಳಗೆರೆಯಿಂದ ಕುಂದಲಹಳ್ಳಿ ರಸ್ತೆ ಸಂಪೂರ್ಣ ಕೆರೆಯಂತೆ ಬದಲಾಗಿದ್ದು, ಜನ ಪರದಾಡುತ್ತಿದ್ದಾರೆ. ಮಳೆ ಹಾಗೂ ಚರಂಡಿ ನೀರು ನಿಂತಿದ್ದು, ಸಾರ್ವಜನಿಕರು ಹೈರಾಣಾಗಿದ್ದಾರೆ. ರಸ್ತೆ ಪೂರ್ತಿ



ಉದಯವಾಹಿನಿ ಚಿತ್ರ

ಗುಂಡಿಮಯವಾಗಿದೆ. ನೀರಿನಲ್ಲಿ ಹೋಗಲಾಗದೆ ವಾಹನ ಸವಾರರು ಜಾರಿ ಬೀಳುತ್ತಿದ್ದಾರೆ. ಮಹದೇವಪುರದಲ್ಲಿರುವ ಜನ ಕೋಟ್ಯಾಂತರ ರೂಪಾಯಿ ತೆರಿಗೆಯನ್ನು ಬಿಬಿಎಂಪಿ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ) ಹಾಗೂ ಸರ್ಕಾರಕ್ಕೆ ಕಟ್ಟುತ್ತೇವೆ. ಆದರೆ, ಕೋಟ್ಯಾಂತರ ರೂಪಾಯಿ ತೆರಿಗೆ ಕಟ್ಟಿದ ಮೇಲೂ ನಾವು ಈ ರೀತಿಯ ಕಚಡಾ ರಸ್ತೆಗಳಲ್ಲಿ ಓಡಾಡುವ ಪರಿಸ್ಥಿತಿ ಇದೆ ಎಂದು ಜನ ಸೋಷಿಯಲ್ ಮೀಡಿಯಾಗಳಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹಲವರು ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಉಸ್ತುವಾರಿ ಸಚಿವ ಜಿ.ಪರಮೇಶ್ವರ್ ಅವರನ್ನು ಟ್ಯಾಗ್ ಮಾಡುತ್ತಿದ್ದಾರೆ. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು ಅವ್ಯವಸ್ಥೆಯ ತಾಣವಾಗಿದೆ.

> **ಮಹದೇವಪುರದ ಈ ರಸ್ತೆಗಳು ಈ ರೀತಿ ಇರುವುದಕ್ಕೆ ಮಹದೇವಪುರ ಶಾಸಕಿ ಮಂಜುಳಾ ಲಿಂಬಾವಳಿ ಅವರೇ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆಮ್ ಆದ್ಮಿ ಪಾರ್ಟಿಯ ಕಾರ್ಯಕರ್ತರು ಕಳೆದ 15 ವರ್ಷಗಳಿಂದ ನೀವೇ ಆಡಳಿತ ನಡೆಸುತ್ತಿದ್ದೀರಿ. ಆದರೂ ಇದೇ ಪರಿಸ್ಥಿತಿ ಇದೆ. ಇದಕ್ಕೆಲ್ಲ (ಈ ಹಿಂದೆ ಅರವಿಂದ ಲಿಂಬಾವಳಿ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು) ನಿಮ್ಮ ಆಡಳಿತವೇ ಕಾರಣ ಎಂದು ಕಿಡಿಕಾರಿದ್ದಾರೆ.**

ಈ ರಸ್ತೆಗಳನ್ನು ಶೀಘ್ರ ಸರಿಪಡಿಸಬೇಕು ಎಂದು ಆಮ್ ಆದ್ಮಿ ಪಾರ್ಟಿ ಆಗ್ರಹಿಸಿದೆ. ಮಹದೇವಪುರದ ಬಳಗೆರೆಯಿಂದ ಕುಂದಲಹಳ್ಳಿ ರಸ್ತೆಯಲ್ಲಿ ನಿಂತಿ ಮಾತನಾಡಿರುವ ಆಮ್ ಆದ್ಮಿ ಪಾರ್ಟಿಯ ಕಾರ್ಯಕರ್ತ ಅಶೋಕ್ ಮೃತ್ಯುಂಜಯ ಅವರು, ಬೆಂಗಳೂರಿನ ರಸ್ತೆಗುಂಡಿಗಳನ್ನು ಮುಚ್ಚುವುದಕ್ಕೆ 1000 ಕೋಟಿ ಖರ್ಚು ಮಾಡಿದ್ದೀರಿ. ಇದು ನಿಮ್ಮ ಸರ್ಕಾರದ ಮತ್ತೊಂದು ಹಗರಣವೇ, ನಿಮ್ಮ ಭ್ರಷ್ಟಾಚಾರ ಮತ್ತು ಬೆಂಗಳೂರಿನಾದ್ಯಂತ ಇರುವ ಹದಗೆಟ್ಟ ರಸ್ತೆಗಳಿಂದ ಬೆಂಗಳೂರಿನ ಜನರು ಬೇಸತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಂಜುಳಾ ಅರವಿಂದ ಲಿಂಬಾವಳಿ ಅವರೇ ನೀವು ಈ ಕ್ಷೇತ್ರದ ಶಾಸಕರು. ಫೋಟೋಗಳಲ್ಲಿ ಮಾತ್ರ ನೀವು ಕಾಣಿಸಿಕೊಳ್ಳುತ್ತಿದ್ದೀರಿ. ನಿಜವಾಗಿಯೂ ಮಹದೇವಪುರದ ಜನರಿಗೆ ಸಹಾಯ ಮಾಡುತ್ತಿಲ್ಲ. ಕೋಟ್ಯಂತರ ರೂಪಾಯಿ ತೆರಿಗೆ ಕಟ್ಟಿದರೂ ಇಲ್ಲಿನ ಜನ ಈ ಹದಗೆಟ್ಟ ರಸ್ತೆಯ ಮೂಲಕ ಹೋಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದಿದ್ದಾರೆ.

> **ಆಮ್ ಆದ್ಮಿ ಪಾರ್ಟಿಯ ಕಾರ್ಯಕರ್ತರು ಮಹದೇವಪುರದ ಬಳಗೆರೆಯಿಂದ ಕುಂದಲಹಳ್ಳಿ ರಸ್ತೆಯಲ್ಲಿ ಮಳೆಯಿಂದ ನಿಂತಿರುವ ನೀರು ಹಾಗೂ ರಸ್ತೆ ಗುಂಡಿಯಲ್ಲೇ ವಿಡಿಯೋ ಮಾಡಿದ್ದು, ಆಕ್ರೋಶ ಹೊರ ಹಾಕಿದ್ದಾರೆ. ಡಿ.ಕೆ ಶಿವಕುಮಾರ್ ಅವರೇ ಇದೇನಾ ಬ್ರ್ಯಾಂಡ್ ಬೆಂಗಳೂರು, ನಾಚಿಕೆ ಆಗಲ್ವಾ ನಿಮಗೆ ಎಂದು ಪ್ರಶ್ನೆ ಮಾಡಿದ್ದಾರೆ.**

# ನಮೋ ಭಾರತ್ ರ್ಯಾಪಿಡೊ ರೈಲು ಸಂಚಾರ ಆರಂಭ

• ಉದಯವಾಹಿನಿ ಬೆಂಗಳೂರು

ನಗರಗಳ ನಡುವಿನ ಸಂಪರ್ಕವನ್ನು ಅಭಿವೃದ್ಧಿಪಡಿಸಲು ರೂಪಿಸಲಾಗಿರುವ ನಮೋ ಭಾರತ್ ರ್ಯಾಪಿಡೋ ರೈಲು ಸಂಚಾರ ಶೀಘ್ರದಲ್ಲೇ ಕರ್ನಾಟಕದಲ್ಲೂ ಆರಂಭವಾಗಲಿದೆ ಎಂದು ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು ಶನಿವಾರ ಹೇಳಿದರು.

ನಗರಕ್ಕೆ ಶನಿವಾರ ಭೇಟಿ ನೀಡಿದ ಅಶ್ವಿನಿ ವೈಷ್ಣವ್ ಅವರು, ದೇವನಹಳ್ಳಿ ರೈಲ್ವೆ ನಿಲ್ದಾಣದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ ನಡೆಸಲಾಗುತ್ತಿರುವ ರೈಲ್ವೆ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರು. ಈ ವೇಳೆ ಕೇಂದ್ರ ಸಚಿವರಿಗೆ, ಕೇಂದ್ರ ರಾಜ್ಯ ಖಾತೆ ಸಚಿವ ವಿ ಸೋಮಣ್ಣ, ಸಂಸದ ಪಿಸಿ ಮೋಹನ್ ಮತ್ತು ರೈಲ್ವೆ ಅಧಿಕಾರಿಗಳು ಸಾಥ್ ನೀಡಿದ್ದರು.

ಕಾಮಗಾರಿ ಪರಿಶೀಲನೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅಶ್ವಿನಿ ವೈಷ್ಣವ್ ಅವರು, ನಗರಗಳ ನಡುವಿನ ಸಂಪರ್ಕವನ್ನು ಅಭಿವೃದ್ಧಿಪಡಿಸಲು ಈ ಯೋಜನೆ ರೂಪಿಸಲಾಗಿದೆ. ಇದು ಒಂದು ನಗರದಿಂದ ಇನ್ನೊಂದು ನಗರಕ್ಕೆ ಅತ್ಯಂತ ವೇಗವಾಗಿ ಸಂಪರ್ಕ ಕಲ್ಪಿಸಲಿದೆ. 150ರಿಂದ200 ಕಿ.ಮೀ. ವ್ಯಾಪ್ತಿಯೊಳಗೆ ಈ ರೈಲುಗಳು ಸಂಚರಿಸಲಿವೆ. ಉದ್ಯೋಗ ಹಾಗೂ ಇತರೆ ಕೆಲಸಗಳಿಗಾಗಿ ತುಮಕೂರು, ಮೈಸೂರಿನಿಂದ ಬೆಂಗಳೂರಿಗೆ ಬರುವವರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

**ನಗರಗಳ ಸಂಪರ್ಕ ಅಭಿವೃದ್ಧಿ**

> **ಇತ್ತೀಚೆಗೆ ದೇಶದ ಮೊದಲ ರ್ಯಾಪಿಡೋ ರೈಲು (ವಂದೇ ಮೆಟ್ರೋ) ಗುಜರಾತ್'ನ ಅಹ್ಮದಾಬಾದ್-ಭುಜ್ ನಡುವೆ ಆರಂಭವಾಗಿತ್ತು. ಅಂತರ್ ನಗರಗಳ ಪ್ರಯಾಣಿಕರ ಆರಾಮದಾಯಕ ಪ್ರಯಾಣಕ್ಕೆ ಈ ರೈಲಿನ ಅಗತ್ಯವಿದೆ. ಹೀಗಾಗಿ ರಾಜ್ಯದಲ್ಲಿ ಮೊದಲ ಹಂತದಲ್ಲಿ ಈ ರೈಲನ್ನು ಬೆಂಗಳೂರಿನಿಂದ ತುಮಕೂರು, ಮೈಸೂರಿಗೆ ಆರಂಭ ಮಾಡಲಾಗುವುದು ಎಂದು ತಿಳಿಸಿದರು.**

# ಮಾಜಿ ಶಾಸಕ ಬಾವಾ ಸೋದರ ನಾಪತ್ತೆ

• ಉದಯವಾಹಿನಿ ಬೆಂಗಳೂರು

ಮಾಜಿ ಶಾಸಕ ಮೊಯಿದ್ದೀನ್ ಬಾವಾ ಸೋದರ ಮುಮ್ತಾಜ್ ಅಲಿ ನಾಪತ್ತೆ ವಿಚಾರವಾಗಿ ಗೃಹ ಸಚಿವ ಪರಮೇಶ್ವರ್ ಪ್ರತಿಕ್ರಿಯೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತಾಡಿದ ಅವರು, ಮುಮ್ತಾಜ್ ಅಲಿ ಅವರ ಬಿಎಂಡಬ್ಲ್ಯೂ ಕಾರ್ ಮಂಗಳೂರಿನ ಕುಳೂರು ಸೇತುವೆ ಮೇಲೆ ಪತ್ತೆ ಆಗಿದೆ.

ಈ ಬಗ್ಗೆ ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ ಎಂದು ಹೇಳಿದರು.ಕಾರು ಆಕ್ಸಿಡೆಂಟ್ ಅಥವಾ ಬೇರೆ ದುರ್ಘಟನೆ ಆಗಿರೋ ಬಗ್ಗೆ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡಿದ್ದಾರೆ ಎಂದರು.

ಈಗಾಗ್ಲೇ ಸ್ಥಳಕ್ಕೆ ಮಾಜಿ ಶಾಸಕ ಮೊಯಿದ್ದೀನ್ ಬಾವಾ ಮತ್ತು ಕುಟುಂಬಸ್ಥರು ಭೇಟಿ ನೀಡಿದ್ದಾರೆ. ಶೀಘ್ರ ಮಾಹಿತಿ ನೀಡುವುದಾಗಿ ಪರಮೇಶ್ವರ್ ಹೇಳಿದರು.

ಮತ್ತೊಂದೆಡೆ, ಮಂಗಳೂರು ಕಮಿಷನರ್ ಈ ಬಗ್ಗೆ ಅನುಪಮ್ ಅಗರ್ ವಾಲ್ ಪ್ರತಿಕ್ರಿಯೆ ನೀಡಿದ್ದು, ಕೇಸ್ ತನಿಖೆ ಬಗ್ಗೆ ವಿವರಣೆ ನೀಡಿದ್ದಾರೆ. ಮುಮ್ತಾಜ್ ಅಲಿ ಅವರ ಕಾರು ಕೂಳೂರು ಬ್ರಿಡ್ಜ್ ಬಳಿ ಪತ್ತೆಯಾಗಿದೆ. ಮುಮ್ತಾಜ್ ಅಲಿಯವರು ಬ್ರಿಡ್ಜ್ ಮೇಲಿಂದ ಜಿಗಿದಿರುವ ಸಾಧ್ಯತೆ ಇದೆ. ಈಜು ತಜ್ಞರು ಸೇರಿದಂತೆ ಅನೇಕರು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದು, ಅವರಿಗಾಗಿ ಶೋಧಕಾರ್ಯ ಮುಂದುವರಿದಿದೆ ಎಂದು ತಿಳಿಸಿದರು. ಮಂಗಳೂರಿನ ಕೂಳೂರು ಬ್ರಿಡ್ಜ್ ಮೇಲೆ ಡ್ಯಾಮೇಜ್ ಆದ ಸ್ಥಿತಿಯಲ್ಲಿ ಅವರ ಕೆಎ19 ಎಂಜಿ0004 ಸಂಖ್ಯೆಯ BMW X5 ಕಾರು ಪತ್ತೆ ಆಗಿದೆ. ಸಾಯುತ್ತೇನೆ ಅಂತಾ ಹೇಳಿ ಮುಮ್ತಾಜ್ ಅಲಿ ಮನೆಯಿಂದ ತೆರಳಿದ್ದರು ಎನ್ನಲಾಗಿದೆ.ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಅಗ್ನಿಶಾಮಕ ಸಿಬ್ಬಂದಿಯಿಂದ ನದಿಯಲ್ಲಿ ಹುಡುಕಾಟ ನಡೆಸಿದ್ದಾರೆ.



ಉದಯವಾಹಿನಿ ಚಿತ್ರ

# ಪಾನಮತ್ತರಾಗಿ ಶಾಲಾ ಮಕ್ಕಳ ವಾಹನ ಚಲಾವಣೆ

• ಉದಯವಾಹಿನಿ ಬೆಂಗಳೂರು

ಕಳೆದ ಒಂಭತ್ತು ತಿಂಗಳ ಅವಧಿಯಲ್ಲಿ ಶಾಲಾ ಬಸ್ ಚಾಲಕರು ಪಾನಮತ್ತರಾಗಿ ವಾಹನ ಚಲಾಯಿಸಿದ 108 ಪ್ರಕರಣಗಳು ಮತ್ತು ಸಾಮರ್ಥ್ಯಕ್ಕಿಂತ ಅಧಿಕ ಮಕ್ಕಳನ್ನು ಕರೆದೊಯ್ಯುವ ಶಾಲಾ ಬಸ್‌ಗಳ ಸುಮಾರು 679 ಪ್ರಕರಣಗಳನ್ನು ಬೆಂಗಳೂರು ಸಂಚಾರ ಪೊಲೀಸರು BTP ದಾಖಲಿಸಿದ್ದಾರೆ.

ಈ ಬಗ್ಗೆ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಪ್ರತಿನಿಧಿಯೊಂದಿಗೆ ಮಾತನಾಡಿದ ಸಂಚಾರ ಪೊಲೀಸ್ ಅಧಿಕಾರಿಗಳು, ನಿರಂತರ ಜಾರಿ ಅಭಿಯಾನಗಳ ಹೊರತಾಗಿಯೂ, ಶಾಲೆಗಳು ಆರಂಭವಾಗುವ ಮೊದಲು ಚಾಲಕರ ಸ್ಥಿತಿಯನ್ನು ಪರಿಶೀಲಿಸುತ್ತಿಲ್ಲ, ಇದು ಮಕ್ಕಳ ಜೀವವನ್ನು ಗಂಭೀರ ಅಪಾಯಕ್ಕೆ ತಳ್ಳುತ್ತದೆ. ಇದುವರೆಗೆ ಪಾನಮತ್ತರಾಗಿ ಶಾಲಾ ವಾಹನಗಳನ್ನು ಚಲಾಯಿಸಿದ ಪ್ರಕರಣಗಳಲ್ಲಿ ಸಂಚಾರ ಪೊಲೀಸರು 1,36,000 ರೂಪಾಯಿ ದಂಡ ವಿಧಿಸಿದ್ದಾರೆ.

ಸಂಚಾರ ಪೊಲೀಸ್ ವಿಭಾಗದ ಉಪ ಕಮಿಷನರ್ (ಪೂರ್ವ ವಿಭಾಗ) ಕುಲದೀಪ್ ಕುಮಾರ್ ಜೈನ್, ಇಲ್ಲಿಯವರೆಗೆ ಯಾವುದೇ ಅಭಿಯಾನ ನಡೆಸಿದಾಗ, ಚಾಲಕರನ್ನು ಪ್ರತಿಬಾರಿ ತಪಾಸಣೆ ನಡೆಸಿದಾಗ ಎಲ್ಲಾ ಚಾಲಕರು ಪ್ರತಿ ತಪಾಸಣೆಯಲ್ಲೂ ಸಮಚಿತ್ತದಿಂದ ವರ್ತಿಸಿದ ಪ್ರಕರಣಗಳಿಲ್ಲ.

15–20 ಚಾಲಕರು ಮದ್ಯಪಾನ ಮಾಡಿರುತ್ತಾರೆ. ಈ ಬಗ್ಗೆ ಶಾಲೆಗಳನ್ನು ಪ್ರಶ್ನಿಸಿದಾಗ, ಚಾಲಕರು ಹಿಂದಿನ ರಾತ್ರಿ ಮದ್ಯಪಾನ ಮಾಡಿದ್ದಾರೆ ಎಂದು ಅವರ ಆಡಳಿತ ಮಂಡಳಿಗಳು ಹೇಳುತ್ತವೆ, ಆದರೆ ಉಸಿರಾಟದ ಪರೀಕ್ಷೆಗಳಲ್ಲಿ ಮಿತಿಗಿಂತ 4–5 ಪಟ್ಟು ಹೆಚ್ಚು ಆಲ್ಕೋಹಾಲ್ ಮಟ್ಟವನ್ನು ಬಹಿರಂಗಪಡಿಸುತ್ತವೆ ಎಂದು ಹೇಳಿದರು.


## ಸಂಚಾರಿ ಪೊಲೀಸರು 21 ಚಾಲಕರ ವಿರುದ್ಧ ಪ್ರಕರಣ ದಾಖಲೆ



**ಸಂಚಾರಿ ಪೊಲೀಸರು 21 ಚಾಲಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಲು ಕಾರಣವಾದ ಇತ್ತೀಚಿನ ಅಭಿಯಾನ ನಂತರ, ಸಂಚಾರಿ ಪೊಲೀಸರು ಈ ವಾಹನಗಳ ಪರ್ಮಿಟ್‌ಗಳನ್ನು ರದ್ದುಗೊಳಿಸುವಂತೆ ಆರ್‌ಟಿಒಗೆ ತಿಳಿಸಿತ್ತು. ಹಿಂದೆ, ಆರ್‌ಟಿಒ ಚಾಲಕರ ಪರವಾನಗಿಯನ್ನು ಮಾತ್ರ ಅಮಾನತುಗೊಳಿಸಿತು, ಆದರೆ ನಿಯಮಾವಳಿಗಳನ್ನು ಉಲ್ಲಂಘಿಸುವುದು ಮತ್ತಷ್ಟು ಹೆಚ್ಚಾಗುತ್ತಿದೆ. ಈಗ, ಈ ವಾಹನಗಳ ಪರ್ಮಿಟ್‌ಗಳನ್ನು ರದ್ದುಗೊಳಿಸುವ ಮೂಲಕ ಹೆಚ್ಚು ನಿರ್ಣಾಯಕ ಕ್ರಮ ತೆಗೆದುಕೊಳ್ಳುವಂತೆ ನಾವು ಆರ್‌ಟಿಒಗೆ ಮನವಿ ಮಾಡಿದ್ದೇವೆ. ಆದಾಗ್ಯೂ, ಉಲ್ಲಂಘನೆ ಮುಂದುವರಿದರೆ, ಟ್ರಾಫಿಕ್ ಪೊಲೀಸರು ಬಸ್‌ಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಆರ್‌ಟಿಒ ನೊಂದಿಗೆ ಕೆಲಸ ಮಾಡುತ್ತಾರೆ ಎಂದು DCP ನ್ಯೂ ಇಂಡಿಯನ್ ಎಕ್ಸ್ ಪ್ರೆಸ್(TNIE) ಪ್ರತಿನಿಧಿಗೆ ತಿಳಿಸಿದ್ದಾರೆ.**

# ಮಾಜಿ ಪಿಎಂ ಮನಮೋಹನ್ ಸಿಂಗ್ ಡೀಪ್ ಫೇಕ್ ವಿಡಿಯೋ ವೈರಲ್!

• ಉದಯವಾಹಿನಿ ಬೆಂಗಳೂರು




ಮಾರುಕಟ್ಟೆಯ ಹೂಡಿಕೆ ಅಪ್ಲಿಕೇಶನ್ ಒಂದರಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರದ್ದು ಎನ್ನಲಾದ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇದೊಂದು ಡೀಪ್ ಫೇಕ್ ವಿಡಿಯೋ ಎಂದು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸಾಧನ ಪತ್ತೆಹಚ್ಚಿದೆ.

ಈ ಅಪ್ಲಿಕೇಶನ್ ಮೂಲಕ ನೀವು 75 ಸಾವಿರ ಗಳಿಸಬಹುದು ಎಂದು ವಿಡಿಯೋದಲ್ಲಿ ಸಂದೇಶ ನೀಡಲಾಗಿದೆ. 'ಕ್ಲಬ್ ಕಿಂಟಾ' ಎಂಬ ಫೇಸ್ ಬುಕ್ ಪೇಜ್ ನಲ್ಲಿ ವಿಡಿಯೋ ಅಪ್ಲೋಡ್ ಮಾಡಲಾಗಿದೆ .ಈ ಅಪ್ಲಿಕೇಶನ್ ಮೂಲಕ ನೀವು 75 ಸಾವಿರ ಗಳಿಸಬಹುದು ಎಂದು ಮನಮೋಹನ್ ಸಿಂಗ್ ಅಪ್ಲಿಕೇಶನ್‌ನಲ್ಲಿ ಹೇಳಿರುವಂತೆ ಡೀಪ್ ಫೇಕ್ ಮಾಡಲಾಗಿದೆ.

ಅನೇಕ ಹೂಡಿಕೆದಾರರು ಹಣ ಕಳೆದುಕೊಂಡಿದ್ದಾರೆ ಎನ್ನಲಾಗಿದೆ.

ಈ ವಿಡಿಯೋವನ್ನ ಫಾಲೋ ಮಾಡಿ ಅನೇಕರು ಯಾಮಾರಿರುವ ಸಾಧ್ಯತೆ ಇದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅನೇಕ ಆಯಾಮಗಳಲ್ಲಿ ತನಿಖೆ ನಡೆಸ್ತಿದ್ದಾರೆ.

ಇದೇ ಫೇಸ್ ಬುಕ್ ಪೇಜ್ ನಲ್ಲಿ ಗೌತಮ್ ಅದಾನಿಯ ವಿಡಿಯೋವನ್ನ ಸಹ ಡೀಪ್ ಫೇಕ್ ಮಾಡಲಾಗಿದೆ. ವಿಡಿಯೋ ಅಪ್ಲೋಡ್ ಮಾಡಿರುವ ಐಪಿ ಅಡ್ರೆಸ್ ಪತ್ತೆ ಮಾಡಿ ತನಿಖೆ ನಡೆಸಲು ಪೊಲೀಸರು ಮುಂದಾಗಿದ್ದಾರೆ.

# ಆಟದ ಮೈದಾನದ ಗೇಟ್ ಬಿದ್ದು ಬಾಲಕ ಸಾವನ್ನಪ್ಪಿರುವುದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ: ವರದಿ ಸಲ್ಲಿಸಿದ ವಿಶೇಷ ಸಮಿತಿ

• ಉದಯವಾಹಿನಿ ಬೆಂಗಳೂರು

ಮಲ್ಲೇಶ್ವರ ರಾಜಾಶಂಕರ್ ಆಟದ ಮೈದಾನದಲ್ಲಿ ಗೇಟ್ ಬಿದ್ದು ಬಾಲಕ ಸಾವನ್ನಪ್ಪಲು ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಅಧಿಕಾರಿಗಳು ಮುಖ್ಯ ಆಯುಕ್ತರಿಗೆ ವರದಿ ಸಲ್ಲಿಸಿದ್ದಾರೆ. ಕಳೆದ ಸೆ.22ರಂದು ಮಲ್ಲೇಶ್ವರದ ರಾಜಾಶಂಕರ್ ಆಟದ ಮೈದಾನದಲ್ಲಿ ಆಡಲು ಬಂದಿದ್ದ ಬಾಲಕ ನಿರಂಜನ್ (11) ಮೇಲೆ ಗೇಟು ಬಿದ್ದು ಮೃತಪಟ್ಟಿದ್ದ.

ಈ ಹಿನ್ನೆಲೆಯಲ್ಲಿ ಆಟದ ಮೈದಾನದ ಸಂಪೂರ್ಣ ಕಾಮಗಾರಿಯ ಕುರಿತು ಹಿರಿಯ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. 1 ವಾರದೊಳಗೆ ಪರಿಶೀಲಿಸಿ ಸಂಪೂರ್ಣ ವರದಿ ನೀಡುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸೂಚಿಸಿದ್ದರು. ಇದರಂತೆ ಸಮಿತಿಯು ಶನಿವಾರ ಮುಖ್ಯ ಆಯುಕ್ತರಿಗೆ ಘಟನೆಗೆ ಆಧರಿಸಿ ವರದಿ ಸಲ್ಲಿಸಿದ್ದು, ವರದಿಯಲ್ಲಿ ಏಳು ಅಂಶಗಳನ್ನು ಎತ್ತಿ ತೋರಿಸಿದ್ದಾರೆ. ಆಟದ ಮೈದಾನದಲ್ಲಿ ನಿರ್ವಹಣೆ ಕೊರತೆ, ಕ್ಲ್ಯಾಂಪ್ ಗಳು ತುಕ್ಕು ಹಿಡಿದಿರುವ ಬಗ್ಗೆ ಸಾರ್ವಜನಿಕರ ದೂರುಗಳು ಬಂದರೂ ಕ್ರಮ ಕೈಗೊಳ್ಳದಿರುವುದು, ಅಧಿಕಾರಿಗಳ ನಿರ್ಲಕ್ಷ್ಯ, ಆಟದ ಮೈದಾನ ನಿರ್ವಹಣೆ ಮಾಡಬೇಕಿದ್ದ ಏಜೆನ್ಸಿ ಹಾಗೂ ಕಾಲ ಕಾಲಕ್ಕೆ ತಪಾಸಣೆ ನಡೆಸಬೇಕಾದ ಅಧಿಕಾರಿಗಳು ಕರ್ತವ್ಯ ನಿರ್ಲಕ್ಷಿಸಿರುವುದು, 216 ಕೆಜಿ ತೂಕದ ಕಬ್ಬಿಣದ ಗೇಟ್‌ನ ವೆಲ್ಡಿಂಗ್ ವೈಫಲ್ಯ, ಗೇಟ್ ಅನ್ನು ಸಂಪೂರ್ಣವಾಗಿ ಹಿಡಿದಿಡಲು ಹೆವಿ ಬೇರಿಂಗ್ ಕ್ಲಾಂಪ್‌ಗಳ ಕೊರತೆ ಮುಂತಾದ ಅಂಶಗಳನ್ನು ಆಯುಕ್ತರ ಗಮನಕ್ಕೆ ತಂದಿದ್ದಾರೆ.

ಅಲ್ಲದೆ, ಆಟದ ಮೈದಾನಕ್ಕೆ ಇಷ್ಟೊಂದು ತೂಕದ ಗೇಟ್ ಅಗತ್ಯವೂ ಇರಲಿಲ್ಲ ಎಂದು ಸಮಿತಿ ತಿಳಿಸಿದೆ ಎಂದು ತಿಳಿದುಬಂದಿದೆ.




ಉದಯವಾಹಿನಿ ಚಿತ್ರ

# ನಾಯಕತ್ವ ಬದಲಾವಣೆಗೆ ಕೈ ಕಮಾಂಡ್ ಕಸರತ್ತು

## ಮುಡಾ ಹಗರಣ, ವಾಲ್ಮೀಕಿ ನಿಗಮ ಹಗರಣ ಇಡೀ ಕಾಂಗ್ರೆಸ್ ಪಕ್ಷಕ್ಕೆ ಕಳಂಕವನ್ನು ತಂದಿದೆ

• ಉದಯವಾಹಿನಿ ಬೆಂಗಳೂರು

ಮುಡಾ ಹಗರಣ ಹಾಗೂ ವಾಲ್ಮೀಕಿ ನಿಗಮ ಹಗರಣ ಇಡೀ ಕಾಂಗ್ರೆಸ್ ಪಕ್ಷಕ್ಕೆ ಕಳಂಕವನ್ನು ತಂದಿದೆ.. ಅದರಲ್ಲೂ ರಾಜಕೀಯ ಇತಿಹಾಸದಲ್ಲಿ ಒಂದೂ ಭ್ರಷ್ಟಾಚಾರದ ಆರೋಪ ಇಲ್ಲದ ಸಿದ್ದರಾಮಯ್ಯ ಕೊರಳಿಗೆ ಮುಡಾ ಹಗರಣ ಸುತ್ತಿಕೊಂಡಿದ್ದು ಭಾರೀ ಮುಜುಗರ ತಂದಿದೆ. ಮೇಲ್ನೋಟಕ್ಕೆ ಸಿದ್ದರಾಮಯ್ಯ ನಾನು ತಪ್ಪು ಮಾಡಿಲ್ಲ, ಬಿಜೆಪಿ ಆರೋಪಗಳು ಸುಳ್ಳು ಎಂದು ಎದೆ ತಟ್ಟಿ ಹೇಳುತ್ತಿದ್ದರೂ ಕೂಡ. ಈ ಆರೋಪ ಸಿದ್ದರಾಮಯ್ಯ ಅವರನ್ನು ದುರ್ಬಲರಾಗುವಂತೆ ಮಾಡಿದ್ದು ಮಾತ್ರ ಸುಳ್ಳಲ್ಲ.. ಮತ್ತೊಂದೆಡೆ ಹೈಕಮಾಂಡ್ ಸಿದ್ದರಾಮಯ್ಯ ಬೆನ್ನಿಗೆ ನಿಂತಿದೆ ಎಂದು ಬಿಂಬಿಸಿದರು ಕೂಡ ಒಳಗೊಳಗೆ ನಾಯಕತ್ವದ ಬದಲಾವಣೆ ಬಗ್ಗೆ ಲೆಕ್ಕಾಚಾರ ಹಾಕುತ್ತಿದೆ ಎಂಬ ಮಾಹಿತಿ ಇದೆ.

ಒಂದು ವೇಳೆ ಹೈಕಮಾಂಡ್ ನಾಯಕತ್ವ ಬದಲಾವಣೆಗೆ ಮುಂದಾಗಿದ್ದೇ ಆದರೆ, ತಮ್ಮ ಸಚಿವ ಸಂಪುಟದಲ್ಲೇ ಇರುವ ಆಪ್ತರೊಬ್ಬರ ಹೆಸರನ್ನು ಪ್ರಸ್ತಾಪಿಸಲು ಚಿಂತನೆ ನಡೆಸಿದ್ದಾರೆಂದು ತಿಳಿದುಬಂದಿದೆ.

ಈ ಮೂಲಕ ಮುಖ್ಯಮಂತ್ರಿ ಹುದ್ದೆಗೇರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹಾದಿ ತಡೆಯಲು ತಂತ್ರ ರೂಪಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಇತ್ತೀಚೆಗಷ್ಟೇ ಹೇಳಿಕೆ ನೀಡಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು, ಯಾರನ್ನೇ ಆಗಲಿ ವೈಯಕ್ತಿಕವಾಗಿ ಗುರಿ ಮಾಡಬಾರದು. ಸಿದ್ದರಾಮಯ್ಯ ವರ್ಚಸ್ಸಿಗೆ ಕಳಂಕ ಹಚ್ಚುವ ಮೂಲಕ ಕಾಂಗ್ರೆಸ್ ಪಕ್ಷಕ್ಕೂ ಹಾನಿ ಮಾಡುವುದು ಬಿಜೆಪಿ ಉದ್ದೇಶ. ಯಾರೇ ಆದರೂ ಇಂದು ಇರಬಹುದು, ನಾಳೆ ಬದಲಾಗಬಹುದು. ಆದರೆ, ಪಕ್ಷ ಮುಂದುವರಿಯುತ್ತದೆ ಎಂದು ಹೇಳಿದ್ದರು. ಈ ಹೇಳಿಕೆ ನಾಯಕತ್ವ ಬದಲಾವಣೆ ಕುರಿತ ಊಹಾಪೋಹಗಳು ಹೆಚ್ಚಾಗುವಂತೆ ಮಾಡಿದೆ.



ಉದಯವಾಹಿನಿ ಚಿತ್ರ

> **ದಲಿತರು ಉನ್ನತ ಹುದ್ದೆಗೆ ಈಗ ಪ್ರಯತ್ನ ಮಾಡದಿದ್ದರೆ, ಮತ್ತೆಂದೂ ಅವಕಾಶ ಸಿಗದಿರಬಹುದು. ಹೀಗಾಗಿ ಸಿದ್ದರಾಮಯ್ಯ ಅವರ ಒಪ್ಪಿಗೆ ಪಡೆದು ಸಭೆ ನಡೆಸಿದ್ದೇವೆಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದ್ದಾರೆ.**

> **ಏತನ್ಮಧ್ಯೆ ಹೇಳಿಕೆ ನೀಡಿದ್ದ ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿದ್ದನ್ನು ತಪ್ಪಾಗಿ ಅರ್ಥೈಸಬಾರದು ಎಂದು ಹೇಳಿದ್ದಾರೆ.**

ಹೇಳಿಕೆ ಬೆನ್ನಲ್ಲೇ ಗೃಹ ಸಚಿವ ಡಾ.ಜಿ.ಪರಮೇಶ್ವರ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಸಿದ್ದರಾಮಯ್ಯ ಅವರ ಜತೆ ಸಭೆ ನಡೆಸಿದ್ದಾರೆ. ಅಹಿಂದ ಗುಂಪಿನಲ್ಲಿರುವ ಎಸ್‌ಸಿ ಅಥವಾ ಎಸ್‌ಟಿ ನಾಯಕರೊಬ್ಬರು ಸಿಎಂ ಆಗಬೇಕೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದರು. ಅಲ್ಲದೆ, ಸತೀಶ್ ಅವರು ಈ ಸಂದೇಶವನ್ನು ದೆಹಲಿ ಭೇಟಿ ನೀಡಿ ಖರ್ಗೆ ಅವರಿಗೂ ತಿಳಿಸಿದ್ದರು. ಆದರೆ, ಹೈಕಮಾಂಡ್ ಈ ಮನವಿಯನ್ನು ನಿರಾಕರಿಸಿದೆ ಎಂದು ಮೂಲಗಳು ತಿಳಿಸಿವೆ. ಒಂದು ಹೈಕಮಾಂಡ್ ಸಿದ್ದರಾಮಯ್ಯ ಅವರ ಸಲಹೆಯನ್ನು ತೆಗೆದುಕೊಂಡಿದ್ದೇ ಆದರೆ, ಸತೀಶ್ ಜಾರಕಿಹೊಳಿಯವರು ಮುಂದಿನ ಸಿಎಂ ಆಗುವ ಸಾಧ್ಯತೆಗಳಿವೆ ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದ್ದಾರೆ. 2 ದಿನಗಳ ಹಿಂದಷ್ಟೇ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ದೆಹಲಿಗೆ ತೆರಳಿದ್ದ ಸತೀಶ್ ಅವರು ನನಗೆ 68 ಶಾಸಕರ ಬೆಂಬಲವಿದ್ದು, ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದೇ ಆದರೆ, ಸಿಎಂ ಆಗಲು ಅರ್ಹನಿರುವುದಾಗಿ ಸ್ಪಷ್ಟವಾಗಿ ತಿಳಿಸಿದ್ದರು ಎಂದು ಕಾಂಗ್ರೆಸ್ ಉನ್ನತ ಮೂಲಗಳು ಮಾಹಿತಿ ನೀಡಿವೆ.ಅಕ್ಟೋಬರ್ 15 ರಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಅವರು ರಾಜ್ಯಕ್ಕೆ ಭೇಟಿ ನೀಡುತ್ತಿರುವ ಕುರಿತ ಪ್ರಶ್ನೆಗೆ ಉತ್ತರಿಸಿ. ಈ ಬಗ್ಗೆ ನನಗೆ ತಿಳಿದಿಲ್ಲ ಎಂದರು. ಈ ಸಮಯದಲ್ಲಿ ನಾನು ದೆಹಲಿಗೆ ಹೋಗುವ ಅಗತ್ಯವೂ ಇಲ್ಲ ಎಂದರು.

> **ಪಕ್ಷದ ನಾಯಕರು ಪಕ್ಷದ ಅಧ್ಯಕ್ಷರನ್ನು ಹೊರತುಪಡಿಸಿ ಬೇರೆ ಯಾರನ್ನು ಭೇಟಿ ಮಾಡಬೇಕು ನಾವು ಮಾಧ್ಯಮಗಳೊಂದಿಗೆ ಸಂಬಂಧ ಹೊಂದಿರುವಂತೆ ನಮ್ಮ ನಾಯಕರು ನಮ್ಮ ಅಧ್ಯಕ್ಷರೊಂದಿಗೆ ಸಂಬಂಧವನ್ನು ಹೊಂದಿದ್ದಾರೆ. ನಾನು ಪ್ರತಿ ಬಾರಿ ದೆಹಲಿಗೆ ಭೇಟಿ ನೀಡಿದಾಗಲೂ ನಮ್ಮ ಅಧ್ಯಕ್ಷರನ್ನು ಭೇಟಿಯಾಗುತ್ತೇನೆ. ನಾನು ಪ್ರತಿದಿನ ಅವರೊಂದಿಗೆ ಸಂಪರ್ಕದಲ್ಲಿದ್ದು, ಪಕ್ಷದ ಬೆಳವಣಿಗೆಗಳ ಕುರಿತು ವರದಿ ನೀಡುತ್ತಿರುತ್ತೇನೆಂದು ತಿಳಿಸಿದ್ದಾರೆ.**

ಅಂತರಾಳದಿಂದ.. EDITORIAL

# ಚುನಾವಣೆ ವೇಳೆ ಗುರ್ಮೀತ್‌ಗೆ ಪೆರೋಲ್: ಅತ್ಯಂತ ಕೆಟ್ಟ ಮಾದರಿ

ಪಂಜಾಬ್, ಹರಿಯಾಣ ಅಥವಾ ರಾಜಸ್ಥಾನದಲ್ಲಿ ಯಾವುದೇ ಚುನಾವಣೆ ನಡೆಯುವಾಗ ಡೇರಾ ಸಚ್ಚಾ ಸೌದಾ ಎಂಬ ಧಾರ್ಮಿಕ ಗುಂಪಿನ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಸಿಂಗ್ ಜೈಲಿನಲ್ಲಿ ಬಂದಿಯಾಗಿ ಇರಬಾರದು ಎಂಬ ಹೊಸ ನಿಯಮವು ಅಘೋಷಿತವಾಗಿ ಚಾಲ್ತಿಗೆ ಬಂದಿದೆ. ಹರಿಯಾಣ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲೂ ಅದನ್ನು ಅತ್ಯಂತ ಶ್ರದ್ಧೆಯಿಂದ ಪಾಲಿಸಲಾಗಿದೆ. ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಅಪರಾಧಿಯಾಗಿರುವ ಗುರ್ಮೀತ್ ನನ್ನು ಹರಿಯಾಣ ವಿಧಾನಸಭಾ ಚುನಾವಣೆಯ ಮತದಾನಕ್ಕೆ ಮೂರು ದಿನಗಳ ಮುಂಚೆ ಪೆರೋಲ್ ಮೇಲೆ ಬಿಡುಗಡೆ ಮಾಡಲಾಗಿದೆ. ನಾಲ್ಕು ವರ್ಷಗಳ ಅವಧಿಯಲ್ಲಿ 15ನೇ ಬಾರಿಗೆ ಈತನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲಾಗಿದೆ.


ಉದಯವಾಹಿನಿ ಚಿತ್ರ

ಈತನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿದ ಪ್ರತಿ ಸಂದರ್ಭ ದಲ್ಲಿಯೂ ಲೋಕಸಭೆ, ವಿಧಾನಸಭೆ. ನಗರ ಸ್ಥಳೀಯ ಸಂಸ್ಥೆಗಳು ಅಥವಾ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಇದ್ದವು ಎಂಬುದು ಕಾಕತಾಳೀಯ ಆಗಿರಲಾರದು. ತನ್ನ ಇಬ್ಬರು ಅನುಯಾಯಿಗಳ ಮೇಲೆ ಅತ್ಯಾಚಾರ ಎಸಗಿರುವ ಅಪರಾಧಕ್ಕಾಗಿ 20 ವರ್ಷಗಳ ಜೈಲು ಶಿಕ್ಷೆಗೆ ಒಳಗಾಗಿರುವ ಈತನನ್ನು ರೋಹ್ಟಕ ಕಾರಾಗೃಹದಲ್ಲಿ ಇರಿಸಲಾಗಿದೆ. ಪತ್ರಕರ್ತರೊಬ್ಬರನ್ನು ಕೊಲೆ ಮಾಡಿದ ಪ್ರಕರಣದಲ್ಲೂ ಈತ ಅಪರಾಧಿ ಎಂದು ಸಾಬೀತಾಗಿದೆ. ಆಗಸ್ಟ್‌ನಲ್ಲಿ ಈತನನ್ನು 21 ದಿನಗಳ ಫರ್ಲೋ' (ತಾತ್ಕಾಲಿಕ ಬಿಡುಗಡೆ) ಮೇಲೆ ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು. ಜೈಲಿಗೆ ಮರಳಿದ ಕೆಲವೇ ದಿನಗಳಲ್ಲಿ ಪೆರೋಲ್ ಕೋರಿ ಈತ ಸಲ್ಲಿಸಿದ್ದ ಅರ್ಜಿಯನ್ನೂ ಮಾನ್ಯ ಮಾಡಲಾಗಿದ್ದು, ಜೈಲಿನಿಂದ 20 ದಿನ ಹೊರಗಿರಲು ಅವಕಾಶ ನೀಡಲಾಗಿದೆ. 20 ದಿನಗಳ ಪೆರೋಲ್ ಅವಧಿಯಲ್ಲಿ ರಾಮ್ ರಹೀಂ ಸಿಂಗ್ ಉತ್ತರ ಪ್ರದೇಶದ ಬಾಗಪತ್‌ನಲ್ಲಿರುವ ತನ್ನ ಆಶ್ರಮದಲ್ಲಿ ತಂಗಲಿದ್ದಾನೆ. ಪೆರೋಲ್ ನೀಡುವಾಗ ಕಠಿಣ ಷರತ್ತುಗಳನ್ನೇನೂ ವಿಧಿಸಿಲ್ಲ.

**ಗಂಭೀರ ಸ್ವರೂಪದ ಕೌಟುಂಬಿಕ ವಿಚಾರಗಳ ಆಧಾರದಲ್ಲಿ ಮಾತ್ರ ಪೆರೋಲ್ ನೀಡಲು ಅವಕಾಶವಿದೆ. ಬಂದಿಯನ್ನು ಪೆರೋಲ್ ಮೇಲೆ ಕಳುಹಿಸದಿದ್ದರೆ ಆತನ ಜೀವನದ ಮೇಲೆ ತೀವ್ರ ಸ್ವರೂಪದ ಪರಿಣಾಮಗಳಾಗುತ್ತವೆ ಎಂಬಂತಹ ಸಮಸ್ಯೆಗಳಿದ್ದರೆ ಮಾತ್ರ ಪೂರಕವಾಗಿ ತೀರ್ಮಾನ ಕೈಗೊಳ್ಳಬಹುದು. ಅದರೆ, ಪೆರೋಲ್ ಕೋರಿ ಗುರ್ಮೀತ್ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ಪ್ರಕ್ರಿಯೆಯು ಶರವೇಗದಲ್ಲಿ ನಡೆದು, ಪೂರಕ ತೀರ್ಮಾನ ಹೊರಬಿದ್ದಿದೆ. ಈ ರೀತಿ ಅತಿವೇಗದಲ್ಲಿ ತೀರ್ಮಾನ ಕೈಗೊಂಡ ಪ್ರಕರಣಗಳು ವಿರಳ. ಮುಖ್ಯಮಂತ್ರಿ ಕಚೇರಿಯಿಂದ ಅರ್ಜಿಯು ಕಾರಾಗೃಹ ಇಲಾಖೆಗೆ ಹೋಗಿ, ಅಲ್ಲಿಂದ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ತಲುಪಿದೆ. ರಾಜ್ಯ ಮುಖ್ಯ ಚುನಾವಣಾಧಿಕಾರಿ ತುರ್ತಾಗಿ ಸಭೆ ನಡೆಸಿ ಒಪ್ಪಿಗೆಯನ್ನೂ ಸೂಚಿಸಿದ್ದಾರೆ.**

ಪೆರೋಲ್ ಅವಧಿಯಲ್ಲಿ ಅಪರಾಧಿಯು ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತಿಲ್ಲ ಮತ್ತು ಹರಿಯಾಣಕ್ಕೆ ಭೇಟಿ ನೀಡುವಂತಿಲ್ಲ ಎಂಬ ಷರತ್ತುಗಳನ್ನು ಹಾಕಲಾಗಿದೆ.

ಸಾಮಾಜಿಕ ಮಾಧ್ಯಮಗಳಲ್ಲಿನ ಪ್ರಚಾರ ಮತ್ತು ಇತರ ವಿಧಾನಗಳು ಜನರನ್ನು ಹೆಚ್ಚು ಪ್ರಭಾವಿಸುವ ಈ ಕಾಲಘಟ್ಟದಲ್ಲಿ ರಾಮ್ ರಹೀಂ ಸಿಂಗ್‌ಗೆ ವಿಧಿಸಿರುವ ಷರತ್ತುಗಳು ಗೌಣ ಎನಿಸುತ್ತವೆ. ಈತನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲು ಯಾರು ಅನುಕೂಲ ಮಾಡಿಕೊಟ್ಟಿದ್ದಾರೋ ಅವರ ಪರವಾಗಿ ಈತನ ಅನುಯಾಯಿಗಳಲ್ಲಿ ಸದ್ಭಾವ ಮೂಡಿಸುವುದಕ್ಕಾಗಿಯೇ ಪೆರೋಲ್ ನೀಡಲಾಗಿದೆ ಎಂಬ ಆರೋಪಗಳಲ್ಲಿ ಹುರುಳಿಲ್ಲದೇ ಇರಲಾರದು. ಹರಿಯಾಣದ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಈತನ ಅನುಯಾಯಿಗಳಿದ್ದು, ಪ್ರಬಲವಾದ ಹಿಡಿತ ಹೊಂದಿದ್ದಾನೆ. ಸಾರ್ವಜನಿಕ ಭಾಷಣ ಇಲ್ಲದೆಯೂ ತನ್ನ ಅನುಯಾಯಿಗಳಿಗೆ ಸಂದೇಶ ರವಾನಿಸಲು ಈತನಿಗೆ ಈಗ ಸಾಧ್ಯವಾಗಲಿದೆ.

ರಾಮ್ ರಹೀಂ ಸಿಂಗ್‌ಗೆ ಪೆರೋಲ್ ನೀಡಿರುವುದು ಚುನಾವಣಾ ಮಾದರಿ ನೀತಿಸಂಹಿತೆ ಉಲ್ಲಂಘನೆಗೆ ಕಾರಣವಾಗಲಿದೆ ಎಂದು ಕಾಂಗ್ರೆಸ್ ಪಕ್ಷವು ಕೇಂದ್ರ ಚುನಾವಣಾ ಆಯೋಗಕ್ಕೆ ತಕರಾರು ಅರ್ಜಿ ಸಲ್ಲಿಸಿತ್ತು. ಆದರೆ, ಆಯೋಗವು ಅದನ್ನು ಮಾನ್ಯ ಮಾಡಿಲ್ಲ. ಹರಿಯಾಣದಲ್ಲಿ ತೀವ್ರವಾದ ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಕಾರಣದಿಂದ ಹತಾಶವಾಗಿರುವ ಬಿಜೆಪಿಯು ಬೆಂಬಲ ಗಿಟ್ಟಿಸುವ ಕೊನೆಯ ಅಸ್ತ್ರವಾಗಿ ಈತನಿಗೆ ಪೆರೋಲ್ ಸಿಗಲು ಸಹಕರಿಸಿದೆ ಎಂಬ ಟೀಕೆಗಳಿವೆ. ಅತ್ಯುತ್ತಮ ರಾಜಕೀಯ ಮತ್ತು ಚುನಾವಣಾ ಪದ್ಧತಿಯನ್ನು ಬೆಂಬಲಿಸುವುದಾಗಿ ಹೇಳಿಕೊಳ್ಳುತ್ತಿರುವ ರಾಜಕೀಯ ಪಕ್ಷವೊಂದು ಚುನಾವಣೆಯಲ್ಲಿ ಗೆಲುವು ಸಾಧಿಸಲು ಅಪರಾಧಿಯೊಬ್ಬನ ಬೆಂಬಲ ಬಯಸುತ್ತಿರುವುದು ದುರದೃಷ್ಟಕರ. ಇದು ಅತ್ಯಂತ ಕೆಟ್ಟ ರಾಜಕೀಯ ಮಾದರಿ. ಇಂತಹ ನಡೆಗೆ ಸಮ್ಮತಿಯ ಮುದ್ರೆ ಒತ್ತುವ ಮೂಲಕ ಚುನಾವಣಾ ಆಯೋಗವು ತನ್ನ ಘನತೆಗೆ ತಾನೇ ಹಾನಿ ಮಾಡಿಕೊಂಡಿದೆ.

## ರಾಮಾಯಣ



### ದೇವತೆಗಳಿಗೆ ನಾರಾಯಣನು ಅಭಯ ಕೊಟ್ಟದ್ದು

• ಹಿಂದಿನ ಸಂಚಿಕೆಯಿಂದ **9ನೆಯ ಅಧ್ಯಾಯ**

ಹಾಗೆಯೇ ಆಗಲೆಂದು ವರವನ್ನು ಕೊಟ್ಟನು, ಆತನು ವರವನ್ನು ಕೇಳುವಾಗ ಮನುಷ್ಯನು ಎಷ್ಟರವನೆಂಬ ಉದಾಸೀನಬುದ್ಧಿಯಿಂದ ಮನುಷ್ಯರಿಂದ ಕೊಲೆಯಿಲ್ಲದಹಾಗೆ ಬೇಡಲಿಲ್ಲ; ಆದ್ದರಿಂದ ಅವನಿಗೆ ಮನುಷ್ಯರಲ್ಲದೆ ಮತ್ತೆ ಯಾರೂ ಮೃತ್ಯುವಾಗಲಾರರು ಎಂದು ಸಂತೋಷ ವಾರ್ತೆಯನ್ನು ಹೇಳಿದನು.

ಆ ಮಾತನ್ನು ಕೇಳಿ ಋಷಿಗಳೂ ದೇವತೆಗಳೂ ಸಂತೋಷಪಟ್ಟರು. ಅದೇ ಸಮಯದಲ್ಲಿ ಸರ್ವವ್ಯಾಪಕನೂ ಅತ್ಯಂತ ಕಾಂತಿಯುಕ್ತನೂ ಶಂಖಚಕ್ರಗದೆಗಳನ್ನು ಧರಿಸಿ ಪೀತಾಂಬರವನ್ನುಟ್ಟುಕೊಂಡಿರುವವನೂ ಜಗದೀಶ್ವರನೂ ಆದ ನಾರಾಯಣನು ಸೂರಮಂಡಲದ ಮೇಲೆ ಕಾಣಿಸುವ ನೀಲಮೇಘದಂತೆ ಗರುಡಾರೂಢನಾಗಿ ರತ್ನ ಖಚಿತವಾದ ಬಾಹುಪುರಿಗಳಿಂದ ಒಪ್ಪುತ್ತ, ನಮಸ್ತ ದೇವತೆಗಳಿಂದಲೂ ನಮಸ್ಕರಿಸಲ್ಪಟ್ಟ ಪಾದಾರವಿಂದಗಳುಳ್ಳವನಾಗಿ ಬ್ರಹ್ಮದೇವನನ್ನು ಕೂಡಿಕೊಂಡು, ಋಷ್ಯಶೃಂಗಮುನೀಶ್ವರನು ಪುತ್ರಕಾಮೇಷ್ಟಿಯನ್ನು ಮಾಡುತ್ತಿದ್ದ ಯಾಗಮಂಟಪಕ್ಕೆ ಬಂದನು. ಆ ಸ್ವಾಮಿಯನ್ನು ಕಂಡು ಸಮಸ್ತದೇವತೆಗಳೂ ಸ್ತೋತ್ರಮಾಡುತ್ತ ಆತನನ್ನು ಕುರಿತು ಎಲೈ ನಾರಾಯಣನೆ, ನೀನು ಜಗದ್ಧಿತಾರ್ಥವಾಗಿ ಅಯೋಧ್ಯಾಧಿಪತಿಯೂ ಧರ್ಮಜ್ಞನೂ ದಾನಶೀಲನೂ ವಸಿಷ್ಠ ಮಹಾಮುನಿಗೆ ಸಮಾನವಾದ ಪ್ರಭಾವವುಳ್ಳವನೂ ಆದ ದಶರಥರಾಯನ ಸ್ತ್ರೀಯರಲ್ಲಿ ಶ್ರೀ ಶ್ರೀ ಕೀರ್ತಿಗಳೆಂಬ ದೇವತಾಸ್ತ್ರೀಯರಿಗೆ ಸಮಾನರಾದ ಕೌಸಲ್ಯಾದೇವಿ ಕೈಕೇಯಾದೇವಿ ಸುಮಿತ್ರಾದೇವಿ ಎಂಬ ಮೂವರು ಪತ್ನಿಯರಲ್ಲಿ ನಾಲ್ಕುಭಾಗ ಹಂಚಿಕೊಂಡು ಅವತರಿಸಿ ಲೋಕ ಕಂಟಕನೂ ವರಗರ್ವಿತನೂ ದೇವತೆಗಳಿಂದಲೂ ಕೊಲ್ಲುವುದಕ್ಕೆ ಅಸಾಧ್ಯನೂ ಆದ ರಾವಣನನ್ನು ಯುದ್ಧದಲ್ಲಿ ಸಂಹರಿಸು. ಮೂರ್ಖನಾದ ರಾವಣನು ಸಮಸ್ತ ದೇವಗಂಧರ್ವಸಿದ್ಧರನ್ನೂ ಉತ್ತಮರಾದ ಋಷಿಗಳನ್ನೂ ತನ್ನ ಪರಾಕ್ರಮಾತಿಶಯದಿಂದ ಬಾಧಿಸುತ್ತಿದ್ದಾನೆ; ಸ್ವರ್ಗಲೋಕದಲ್ಲಿ ದೇವೇಂದ್ರನ ನಂದನವನದಲ್ಲಿ ವಿಲಾಸಾರ್ಥವಾಗಿ ಕ್ರೀಡಿಸುತ್ತಿರುವ ಗಂಧರ್ವ ಅಪ್ಸರ ಸ್ತ್ರೀಯರನ್ನು ಬಾಧಿಸುತ್ತಾನೆ, ಆದ್ದರಿಂದ ರಾವಣನನ್ನು ಕೊಲ್ಲುವುದಕ್ಕೋಸ್ಕರ ಸಮಸ್ತ ಋಷಿಗಳನ್ನೂ ಕೂಡಿಕೊಂಡು ನಾವೆಲ್ಲರೂ ನಿನ್ನನ್ನು ಮರೆಹೊಕ್ಕೆವು: ನಮಗೆಲ್ಲರಿಗೂ ನೀನೇ ಗತಿಯಾದ್ದರಿಂದ ಮನುಷ್ಯಲೋಕದಲ್ಲಿ ದೇವತೆಗಳಿಗೆ ಶತ್ರುಗಳಾದ ರಾಕ್ಷಸರ ವಧೆಯನ್ನು ಮಾಡುವುದಕ್ಕೆ ಯತ್ನ ಮಾಡಬೇಕು. ಲೋಕಕಂಟಕನಾದ ರಾವಣನನ್ನು ಕೊಲ್ಲಬೇಕು ಎಂದು ಪ್ರಾರ್ಥನೆ ಮಾಡಿದರು. ಆಗ ಸಮಸ್ತ ದೇವತಗಳಿಗೂ ಒಡೆಯನ್ನೂ ದೇವೋತ್ತಮನೂ ಭಜಕರಿಗೆ ಸಕಲಾಭೀಷ್ಟವರಪ್ರದನೂ ಆದ ಶ್ರೀಮಹಾವಿಷ್ಣುವು ಬ್ರಹ್ಮನೇ ಮೊದಲಾದ ದೇವತೆಗಳನ್ನು ನೋಡಿ ಎಲೈ ದೇವತೆಗಳಿರಾ, ನಿಮಗೆ ಇನ್ನು ಭಯವು ಬೇಡ, ಯುದ್ಧಾಂಗಣದಲ್ಲಿ ರಾವಣನನ್ನು ಪುತ್ರ ಪೌತ್ರ ಮಿತ್ರ ಜ್ಞಾತಿ ಬಾಂಧವರೊಡನೆ ಸಂಹರಿಸುವೆನು, ನಿಮಗೆ ಕ್ಷೇಮವಾದೀತು; ನಾನು ರಾಮಾವತಾರ ಮಾಡಿ ದುರಾತ್ಮನಾದ, ಅತ್ಯಂತ ಕ್ರೂರಬುದ್ಧಿಯುಳ್ಳವನಾದ.

ಮುಂದುವರಿಯುವುದು...

# ಆಧುನಿಕ ಜೀವನಶೈಲಿ, ಒತ್ತಡಗಳಿಂದಾಗಿ ಸಮಸ್ಯೆಗಳ ಉಲ್ಬಣ

## ಕರ್ನಾಟಕ ಕಾರ್ಮಿಕರ ಪ್ರಜಾ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಮೀಸೆ ಸತೀಶ್ ಅಭಿಮತ

• ಉದಯವಾಹಿನಿ ತುಮಕೂರು


ಉದಯವಾಹಿನಿ ಚಿತ್ರ

**ವ್ಯಾಯಾಮದಿಂದ ಬೇನೆಗಳಿಂದ ದೂರ**

ಆಧುನಿಕ ಜೀವನಶೈಲಿ, ಒತ್ತಡಗಳಿಂದಾಗಿ ಹದಿಹರೆಯದವರಲ್ಲಿ ಹೆಚ್ಚಾಗಿ ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ಎಚ್ಚರಿಕೆಯ ಗಂಟೆ ಯಾಗಿದೆ. ಇದರ ನಡುವೆಯೇ ರಕ್ತದೊತ್ತಡ, ಮಧುಮೇಹ, ಕೊಬ್ಬು ನಿಯಂತ್ರಣ, ನಿಯಮಿತ ಆಹಾರ ಸೇವನೆ ಹಾಗೂ ವ್ಯಾಯಾಮದಿಂದ ಹೃದಯ ಸಂಬಂಧಿ ಬೇನೆಗಳಿಂದ ದೂರವುಳಿಯಬಹುದು ಈ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಸೆಪ್ಟೆಂಬರ್ 29 ರಂದು ವಿಶ್ವಹೃದಯ ದಿನ ಆಚರಿಸಲಾಗುತ್ತದೆ ಈ ಹೃದಯರಕ್ತನಾಳದ ಸಮಸ್ಯೆಗಳಿಂದ ಹೆಚ್ಚು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದು ಅನಾರೋಗ್ಯಕರ ಆಹಾರ ಪದ್ಧತಿ ಮತ್ತು ಜಡ ಜೀವನಶೈಲಿಯು ಎಲ್ಲಾ ವಯಸ್ಸಿನ ಜನರ ಹೃದಯದ ಮೇಲೆ ಪರಿಣಾಮ ಬೀಳುತ್ತಿದೆ. ಅದರ ಬಗ್ಗೆ ಅರಿವು ಮೂಡಿಸುವುದೇ ಈ ದಿನದ ಉದ್ದೇಶವಾಗಿದೆ ಎಂದು ಅಖಿಲ ಕರ್ನಾಟಕ ಕಾರ್ಮಿಕರ ಪ್ರಜಾ ವೇದಿಕೆ(ರಿ) ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಮೀಸೆ ಸತೀಶ್ ತಿಳಿಸಿದರು.

ನಗರದ ಕಲ್ಪತರು ಅಭಿನಯ ಶಾಲೆಯಲ್ಲಿ ಅಖಿಲ ಕರ್ನಾಟಕ ಕಾರ್ಮಿಕರ ಪ್ರಜಾ ವೇದಿಕೆ(ರಿ) ವತಿಯಿಂದ ಹಮ್ಮಿಕೊಂಡಿದ್ದ ವಿಶ್ವಹೃದಯ ದಿನ ಆಚರಣೆ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅತಿ ಚಿಕ್ಕ ವಯಸ್ಸಿನಲ್ಲಿಯೇ ಹೃದಯ ಸನಸ್ಯೆಗಳು ಕಾಣಿಸಿ ಕೊಳ್ಳುತ್ತಿರುವುದು ಆತಂಕಕರವಾದ ವಿಷಯವಾಗಿದ್ದು ಇದ್ದಕ್ಕೆ ಇಂದಿನ ಒತ್ತಡದ ಜೀವನ ಸೈಲಿಯ ಜೊತೆಗೆ ನಾವು ಸೇವಿಸುತ್ತಿರುವ ವಿಷಯುಕ್ತ ಆಹಾರ ಪದ್ದತಿಯಾಗಿದೆ ಇಂದಿನ ಆಧುನಿಕ ಕಾಲದಲ್ಲಿ ಹಣ್ಣು ತರಕಾರಿ ಸೊಪ್ಪು ಸೇರಿದಂತೆ ಪ್ರತಿಯೊಂದು ಬೆಳೆಗೂ ಔಷಧಿ ಸಿಂಪಡಣೆ ಮಾಡಿಯೆ ಬೆಳೆ ಬೆಳೆಯುವಂತಾಗಿದೆ ಇದರಲ್ಲಿನ ವಿಷಯುಕ್ತ ರಾಸಾಯನಿಕ ಅಂಶ ನಾವು ತಿನ್ನುವ ಪ್ರತಿಯೊಂದು ಆಹಾರದ ಮೂಲಕ ನಮ್ಮ ದೇಹ ಸೇರುತ್ತದೆ ಇದರಿಂದ ನಮ್ಮ ದೇಹದ ಮೇಲೆ ಆನೇಕ ದುಷ್ಪಾರಿಣಾಮಗಳು ಉಂಟಾಗುತ್ತವೆ ಈ ಅಂಶ ಪ್ರತಿಯೊಬ್ಬರಿಗೂ ತಿಳಿದಿರುವ ವಿಷಯವಾಗಿದ್ದರೂ ಕೂಡ ಇದು ಅನಿವಾರ್ಯವಾಗಿದೆ ಇವುಗಳ ಜೊತೆಗೆ ನಾವು ಆಹಾರದಲ್ಲಿ ಸೇವಿಸುವ ಎಣ್ಣೆ ಕಲಬೆರಕೆಯಿಂದ ಕೂಡಿದ್ದು ಇದು ಹೃದಯ ಸಮಸ್ಯೆಗೆ ಮುಖ್ಯಕಾರಣವಾಗಿದೆ ಎಂದು ತಿಳಿಸಿದರು. ಈ ಹೃದಯ ಸಮಸ್ಯೆಗಳು ಯಾವಗ ಯಾವ ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ ಎಂದು ತಿಳಿಯುವುದಿಲ್ಲ ಹಾಗಾಗಿ 30 ವರ್ಷ ದಾಟಿದ ಪ್ರತಿಯೊಬ್ಬರು ಆಗಾಗ ಪರೀಕ್ಷೆ ಮಾಡಿಸಿಕೊಳ್ಳುವುದು ಅವಶ್ಯಕವಾಗಿದೆ ಇದರ ಜೊತೆಗೆ ದಿನ ಬೆಳಗ್ಗೆ ವ್ಯಾಯಮಾ ಮಾಡುವುದು, ವಾಕ್ ಮಾಡುವುದು, ಸಮತೋಲಿತ ಆಹಾರ ಸೇವಿಸುವುದು, ದೈಹಿಕ ಚಟುವಟಿಕೆ ಹೆಚ್ಚಿಸಿಕೊಳ್ಳುವ ಮೂಲಕ ನಮ್ಮ ಹೃದಯ ಸಂಬಂಧಿ ಕಾಯಿಲೆಯನ್ನ ದೂರಮಾಡಿಕೊಳ್ಳಬಹದು. ಅತಿ ಮುಖ್ಯವಾಗಿ ಅಧಿಕ ಕೊಲೆಸ್ಟ್ರಾಲ್ ಮಟ್ಟ ಕಡಿಮೆ ಮಾಡಿಕೊಳ್ಳುವುದು, ಅಧಿಕ ರಕ್ತದೊತ್ತಡವನ್ನು ನಿಯಂತ್ರಣ ಮಾಡಿಕೊಳ್ಳುವುದು ಹಾಗೂ ಮಧುಮೇಹ ಇದ್ದರೆ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟ ನಿಯಂತ್ರಣ,ಧೂಮಪಾನ ತ್ಯಜಿಸುವ ಮೂಲಕ ನಮ್ಮ ಹೃದಯ ಸಮಸ್ಯೆಗಳನ್ನ ಆದಷ್ಟು ದೂರ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು. ಹೃದ್ರೋಗಕ್ಕೆ ಅಪಾಯಕಾರಿ ಅಂಶಗಳೆಂದರೆ ಅಧಿಕ ರಕ್ತದೊತ್ತಡ, ಅಧಿಕ ಕೊಲೆಸ್ಟ್ರಾಲ್, ಧೂಮಪಾನ, ಕಳಪೆ ಆಹಾರ, ದೈಹಿಕ ಚಟುವಟಿ ಕೆಯ ಕೊರತೆ ಮತ್ತು ಅತಿಯಾದ ಮದ್ಯಪಾನ. ಈ ಮಾರ್ಪಡಿಸಬಹುದಾದ ಅಂಶಗಳ ಮೇಲೆ ಕೇಂದ್ರೀಕರಿಸುವ ಮೂಲಕ, ಸಮತೋಲಿತ ಆಹಾರವನ್ನು ತಿನ್ನುವುದು, ನಿಯಮಿತವಾಗಿ ವ್ಯಾಯಾಮ ಮಾಡುವುದು ಮತ್ತು ತಂಬಾಕು ಮತ್ತು ಮದ್ಯಪಾನವನ್ನು ತಪ್ಪಿಸುವಂತಹ ಆರೋಗ್ಯಕರ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ನಾವು ಈ ಹೃದಯ ಸಮಸ್ಯೆ ಕಾಯಿಲೆಗಳನ್ನ ದೂರಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಉಚಿತ ಆರೋಗ್ಯ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದ್ದು ಹೃದಯ ಸಂಬಂಧಿ ಕಾಯಿಲೆಗಳನ್ನ ಪರೀಕ್ಷಿಸಲಾಯಿತು ನೂರಾರು ಜನ ಈ ಆರೋಗ್ಯ ತಪಾಸಣೆ ಕಾರ್ಯಕ್ರಮಲ್ಲಿ ತಮ್ಮ ಆರೋಗ್ಯ ಪರೀಕ್ಷಿಸಿಕೊಂಡರು ಕಾರ್ಯಕ್ರಮದಲ್ಲಿ ಕಲ್ಪತರು ಅಭಿನಯ ಶಾಲೆಯ ಸಂಸ್ಥಾಪಕರಾದ ಆನಂದ್, ಉಷಾರಾಜ್ ನಿವೃತ್ತ ಗ್ರೇಡ್ 2 ತಹಶೀಲ್ದಾರ್ ಗೋವಿಂದಯ್ಯ, ನಾಗರಾಜ್, ಲೋಹಿತೇಶ್ವರ ,ನಾರಾಯಣ ನಾಯಕ್, ಎಸ್ ಹೆಚ್ ಬಾಬು (ಹೆಗ್ಗೆರೆ) ಪುರುಷೋತ್ತಮ್, ವಸಿಂ, ಹರ್ಷಿತ್, ಕುಮಾರ್ ಚಿತ್ರನಟ (ಆಟೋ ಘಟಕ)ಜಿಲ್ಲಾಧ್ಯಕ್ಷರಾದ ನವೀನ್ ಕುಮಾರ್ ಸೇರಿದಂತೆ ಆನೇಕ ಕಲಾವಿದರು ಕಾರ್ಯಕರ್ತರು ಉಪಸ್ಥಿತರಿದ್ದರು.

> **ವಿಶ್ವ ಹೃದಯ ಆಚರಣೆ ಈ ದಿನ ಹೃದಯದ ಆರೋಗ್ಯ, ಹೃದಯರಕ್ತನಾಳದ ಕಾಯಿಲೆಗಳು, ಹೃದಯದ ಮೇಲೆ ಅತಿಯಾದ ವ್ಯಾಯಾಮದ ಪರಿಣಾಮ ಮತ್ತು ಹೃದಯದ ಆರೈಕೆ ಹೇಗೆ ಅತ್ಯಂತ ಮಹತ್ವದ್ದಾಗಿದೆ ಎಂಬುದರ ಕುರಿತು ಜಾಗೃತಿ ಮೂಡಿಸುವ ಒಂದು ಸಂದರ್ಭವಾಗಿದೆ ಮಾನವನ ಹೃದಯವು ದೇಹದಾದ್ಯಂತ ರಕ್ತವನ್ನು ಪಂಪ್ ಮಾಡುವ ಜವಾಬ್ದಾರಿಯನ್ನು ಹೊಂದಿದೆ, ಅಂಗಗಳು ಮತ್ತು ಅಂಗಾಂಶಗಳಿಗೆ ಅಗತ್ಯವಾದ ಆಮ್ಲಜನಕ ಮತ್ತು ಪೋಷಕಾಂಶಗಳನ್ನು ತಲುಪಿಸುತ್ತದೆ. ಹೃದಯದ ಕಾರ್ಯವು ರಾಜಿಯಾದಾಗ, ಹೃದಯ ವೈಫಲ್ಯ, ಪಾರ್ಶ್ವವಾಯು ಮತ್ತು ಇತರ ಮಾರಣಾಂತಿಕ ಪರಿಸ್ಥಿತಿಗಳಂತಹ ತೀವ್ರ ಆರೋಗ್ಯ ಸಮಸ್ಯೆಗಳ ಅಪಾಯವು ಹೆಚ್ಚಾಗುತ್ತದೆ ಎಂದು ತಿಳಿಸಿದರು.**
>
> ರಾಜ್ಯ ಉಪಾಧ್ಯಕ್ಷರಾದ ಮೋಹನ್ ಕುಮಾರ್

## ಸಾಮಾಜಿಕ ಕಳಕಳಿ



**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

# ಚುಟುಕುಗಳು

### ನವ ಚೈತನ್ಯ

ಮನದಲಿ ಮೂಡುವ ಭಾವ ನವಚೈತನ್ಯವಾಗಿರಲಿ
ಅನುಕಂಪವ ಬೇಡದಲೇ ಜೀವನ ನಡೆಸುವಂತಾಗಲಿ
ಬದುಕು ಸಾರ್ಥಕತೆಯನ್ನು ಕೇಳುವಂತಾಗಲಿ
ಮಾಡುವ ಕಾರ್ಯ ಎಲ್ಲರಿಗೂ ಹಿತವಾಗಿರಲಿ.....

### ದಸರಾ ಸಂಭ್ರಮ


ದಸರದ ಸಂಭ್ರಮದಲಿ ನಾವೆಲ್ಲ
ಕುಣಿದು ಕುಪ್ಪಳಿಸುತ ಸಾಗುವೆವೆಲ್ಲ
ದೇವಿಯರ ಅಲಂಕಾರ ಗಮನಿಸುವೆವೆಲ್ಲ
ಭಕ್ತಿ ಭಾವದಲಿ ಸಂಭ್ರಮಿಸುವೆವೆಲ್ಲ

### ಭಕ್ತಿಯ ಸಿಂಚನ

ನವರಾತ್ರಿಯಲಿ ಭಕ್ತಿಯ ಸಿಂಚನದಿ
ಮಡಿ ಮೈಲಿಗೆಯ ಆಹ್ವಾನದಿ
ಬದುಕಿನಲಿ ಸುಖ ಸಂತೋಷಕೆ ಕೇಳುತಲಿ
ಸಂತಸದಿ ಪೂಜೆಯ ಮಾಡುತಲಿ......

### ಅಂತರಂಗ

ಅಂತರಂಗವು ಎಲ್ಲರಲು ಶುದ್ದವಾಗಿರಲಿ
ಬಹಿರಂಗದಲಿ ತೋರಿಕೆ ತೋರದಿರಲಿ
ಮನದಾಳದ ಅನುಭವದ ಮಾತುಗಳಲಿ
ನಿಷ್ಕಲ್ಮಶತೆ ಪ್ರತಿಯೊಬ್ಬರಲು ತುಂಬಿರಲಿ....


ಉದಯವಾಹಿನಿ ಚಿತ್ರ

# ಹುಣಸೆ ಹಣ್ಣಿನ ರಸದ ಅದ್ಭುತ ಪ್ರಯೋಜನಗಳಿವು

• ಉದಯವಾಹಿನಿ ಬೆಂಗಳೂರು

ಹುಣಸೆಹಣ್ಣು ಭಾರತೀಯ ಪಾಕಪದ್ಧತಿಯಲ್ಲಿ ಬಳಸುವ ಪದಾರ್ಥಗಳಲ್ಲಿ ಒಂದಾಗಿದೆ. ಹುಣಸೆಹಣ್ಣು ಸ್ವಲ್ಪ ಸಿಹಿ ಮತ್ತು ಸ್ವಲ್ಪ ಹುಳಿ ಅಂಶವನ್ನು ಹೊಂದಿದೆ. ಹುಣಸೆಹಣ್ಣಿನ ಹೆಸರು ಹೇಳಿದರೆ ಅನೇಕರ ಬಾಯಲ್ಲಿ ನೀರೂರುತ್ತದೆ. ಹುಣಸೆಹಣ್ಣು ಅನೇಕ ಪ್ರಯೋಜನಗಳನ್ನು ಹೊಂದಿದೆ. ಪ್ರತಿ ದಿನ ಖಾಲಿ ಹೊಟ್ಟೆಯಲ್ಲಿ ಬೆಳಗಿನ ಸಮಯದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹುಣಸೆ ಹಣ್ಣಿನ ರಸ ಸೇವಿಸುವುದರಿಂದ ನಿಮ್ಮ ತ್ವಚೆಯ ಸೌಂದರ್ಯ ಹೆಚ್ಚಾಗುವುದರ ಜೊತೆಗೆ ಚರ್ಮದ ಮೇಲಿನ ಕಲೆಗಳು ನಿವಾರಣೆಯಾಗಿ ಬ್ಲಾಕ್ಹೆಡ್ ಮತ್ತು ಮೊಡವೆಗಳ ಸಮಸ್ಯೆ ಇಲ್ಲವಾಗುತ್ತದೆ.

ಹುಣಸೆ ಹಣ್ಣಿನ ರಸದಲ್ಲಿ ನಿರೋಧಕ ಶಕ್ತಿ , ಮೆಗ್ನೀಸಿಯಮ್ ಸಮೃದ್ಧವಾಗಿದೆ ಮತ್ತು ತೂಕ ನಷ್ಟಕ್ಕೆ ಸಹಾಯ ಮಾಡುತ್ತದೆ ಎಂದು ಹೇಳಲಾಗುತ್ತದೆ.

ಹುಣಸೆ ಹಣ್ಣಿನ ರಸ ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸುತ್ತದೆ. ಇದು ರಕ್ತವನ್ನೂ ಶುದ್ಧಗೊಳಿಸುತ್ತದೆ. ಇದು ಮಧುಮೇಹ ವಿರೋಧಿ, ಕಣ್ಣು ಮತ್ತು ಚರ್ಮಕ್ಕೆ ಒಳ್ಳೆಯದು ಎಂದು ಹೇಳಲಾಗುತ್ತದೆ. ಹುಣಸೆ ಹಣ್ಣಿನಲ್ಲಿ ವಿಟಮಿನ್ ಸಿ, ಪೊಟ್ಯಾಸಿಯಮ್, ಮೆಗ್ನೀಸಿಯಮ್ ಮತ್ತು ಕಬ್ಬಿಣದಂತಹ ಪ್ರಮುಖ ಖನಿಜಗಳನ್ನು ಒದಗಿಸುತ್ತದೆ ಎಂದು ಹೇಳಲಾಗುತ್ತದೆ. ಮತ್ತು ಕ್ಯಾನ್ಸರ್ ಸೇರಿದಂತೆ ದೀರ್ಘಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಹೇಳಲಾಗುತ್ತದೆ.


ಉದಯವಾಹಿನಿ ಚಿತ್ರ

> **ಹುಣಸಿ ರಸವನ್ನು ಬೇರೊಂದು ಬಟ್ಟಲಿಗೆ ಸೋಸಿಕೊಳ್ಳಿ. ಸ್ವಲ್ಪ ಹೊತ್ತು ಆರಿದ ನಂತರ ಅದಕ್ಕೆ 1 ಟೀ ಚಮಚ ಜೇನು ತುಪ್ಪ ( ಬೇಕಾದಲ್ಲಿ ಬೆಲ್ಲ ) ಮತ್ತು 2 – 3 ಐಸ್ ಗಡ್ಡೆಗಳನ್ನು ಹಾಕಿ. ಹುಣಸೆ ಹಣ್ಣಿನ ಜ್ಯೂಸ್ ಸವಿಯಲು ಸಿದ್ಧವಾಗುತ್ತದೆ.**

> **ಹುಣಸೆ ಹಣ್ಣನ್ನು ತೆಗೆದುಕೊಂಡು ನೀರಿನಲ್ಲಿ ಚೆನ್ನಾಗಿ ತೊಳೆದು ಅದರ ಬೀಜಗಳನ್ನು ಬೇರ್ಪಡಿಸಿ. ಎರಡು ಗ್ಲಾಸ್ ನೀರನ್ನು ಸ್ಟೌ ಮೇಲೆ ಕುದಿಯಲಿಟ್ಟು ಚೆನ್ನಾಗಿ ಕುದಿಸಿ ಅದಕ್ಕೆ ತೊಳೆದ ಹುಣಸೆ ಹಣ್ಣನ್ನು ಹಾಕಿ.ಸುಮಾರು 3 ರಿಂದ 5 ನಿಮಿಷಗಳು ಇದನ್ನು ಚೆನ್ನಾಗಿ ಕುದಿಯುವಂತೆ ನೋಡಿಕೊಳ್ಳಿ.**

ಹುಣಸೆ ಹಣ್ಣಿನ ರಸವನ್ನು ನಿಯಮಿತವಾಗಿ ಸೇವಿಸುವುದರಿಂದ ಹೃದಯರಕ್ತನಾಳದ ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ.ಇದು ಹೃದ್ರೋಗದ ಅಪಾಯವನ್ನು ಕಡಿಮೆ ಮಾಡುತ್ತದೆ ಎಂದು ಹೇಳಲಾಗುತ್ತದೆ.

ನಿಮ್ಮ ದೈನಂದಿನ ಮೆಗ್ನೀಸಿಯಮ್ ಅವಶ್ಯಕತೆಗಳನ್ನು ಪೂರೈಸಲು ಹುಣಸೆ ಹಣ್ಣಿನ ರಸವನ್ನು ಕುಡಿಯುವುದು ಅನುಕೂಲಕರವಾಗಿದೆ. ಹೃದಯದ ಲಯ ಮತ್ತು ಸ್ನಾಯುವಿನ ಸಂಕೋಚ ನವನ್ನು ನಿಯಂತ್ರಿ ಸುತ್ತದೆ. ಇದು ರಕ್ತ ದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿಡುತ್ತದೆ ಎಂದು ಹೇಳಲಾಗುತ್ತದೆ.

# ನವರಾತ್ರಿಯ ವ್ರತಗಳು, ಪೂಜೆ ಮಾಡುವುದು ಉತ್ತಮ

• ಉದಯವಾಹಿನಿ, ವಿಶೇಷ

ಅಮಾಯುಕ್ತಾ ನ ಕರ್ತವ್ಯಾ ಪ್ರತಿಪತ್ಪೂಜನೆ ಮಮ ।
ಮುಹೂರ್ತಮಾತ್ರಾ ಕರ್ತವ್ಯಾ ದ್ವಿತೀಯಾದಿಗುಣಾನ್ವಿತಾ ॥

ಅರ್ಥ : ಅಮವಾಸ್ಯೆಯುಕ್ತ ಪಾಡ್ಯದಂದು ನವರಾತ್ರಿಯ ವ್ರತ ಮತ್ತು ಪೂಜೆಯನ್ನು ಮಾಡಬಾರದು. ಇಂತಹ ಸಮಯದಲ್ಲಿ ಪಾಡ್ಯಯುಕ್ತ ಬಿದಿಗೆಯಂದು ವ್ರತವನ್ನು ಪ್ರಾರಂಭಿಸಿ ಪೂಜೆಯನ್ನು ಮಾಡುವುದು ಉತ್ತಮ.

ಹಸ್ತ ನಕ್ಷತ್ರಯುಕ್ತ ಪಾಡ್ಯದಂದು ಕಲಶವನ್ನು ಸ್ಥಾಪನೆ ಮಾಡುವುದು ಉತ್ತಮ. ತಮ್ಮ ಕುಲಾಚಾರಕ್ಕನುಸಾರ ಅಷ್ಟಮಿ ಅಥವಾ ನವಮಿ ತಿಥಿಗೆ ಹವನವನ್ನು ಮಾಡಬೇಕು. ಅನಂತರ ಅನ್ನಗ್ರಹಣ ಮಾಡಬೇಕು. ಸಂಪೂರ್ಣ ಪೂಜಾಸಾಮಗ್ರಿಗಳ, ಹಾಗೆಯೇ ದೇವಿಯ ಪ್ರತಿಮೆಯನ್ನು ಅದೇ ದಿನ ವಿಸರ್ಜನೆ ಮಾಡಬೇಕು. ದೇವಿಯ ಪೂಜೆಯಲ್ಲಿ ಅರಿಶಿಣ-ಕುಂಕುಮ, ಬಿಲ್ವಪತ್ರೆ ಮುಂತಾದವುಗಳಿರುವುದು ಉತ್ತಮ. ದೇವಿಯ ಪೂಜೆಯಲ್ಲಿ ತುಳಸಿ ಮತ್ತು ಗರಿಕೆಗಳನ್ನು ಉಪಯೋಗಿಸುವಂತಿಲ್ಲ.

**ಮುಂದಿನಂತೆ ಯಾವುದಾದರೂಂದು ಪ್ರಕಾರ ದ ಉಪಾಸನೆಯನ್ನು ಮಾಡಬಹುದು:** ಶ್ರೀ ದುರ್ಗಾಸಪ್ತಶತಿಯನ್ನು ಪಠಿಸುವುದು, ಪ್ರತಿದಿನ 15 ಬಾರಿ ಶ್ರೀಸೂಕ್ತದ ಪಠಣವನ್ನು ಮಾಡಬೇಕು. ಅದಕ್ಕಿಂತ ಮೊದಲು ಸೂರ್ಯಮಂತ್ರದ ಒಂದು ಮಾಲೆ ಜಪವನ್ನು ಮಾಡಬೇಕು.

**ಶ್ರೀಸೂಕ್ತದ ತಾಂತ್ರಿಕ ಉಪಾಸನೆ :** ಈ ಉಪಾಸನೆಯನ್ನು ಪ್ರತಿದಿನ ಮುಂಜಾನೆ 2.30 ಕ್ಕೆ ಪ್ರಾರಂಭ ಮಾಡಬೇಕು. ಮೊದಲು ವಿನಿಯೋಗ, ನ್ಯಾಸ ಮುಂತಾದವುಗಳನ್ನು ಮಾಡಬೇಕು. ಅನಂತರ ಶ್ರೀಯಂತ್ರದ ಮೇಲೆ ಶ್ರೀಲಕ್ಷ್ಮಿಯ ಮೂರ್ತಿಯನ್ನು ಇಟ್ಟು ಶ್ರೀಸೂಕ್ತವನ್ನು 21 ಬಾರಿ ಪಠಿಸಿ ಅಭಿಷೇಕ ಮಾಡಬೇಕು. ಬಳಿಕ 11 ಬಾರಿ ಶ್ರೀಸೂಕ್ತವನ್ನು ಪಠಿಸಿ ತುಪ್ಪ ಮತ್ತು ಗುಗ್ಗುಳಗಳಿಂದ ಹವನವನ್ನು ಮಾಡಬೇಕು. ಇದರಿಂದ ಲಕ್ಷ್ಮೀಮಾತೆಯು ಪ್ರತ್ಯಕ್ಷ ದರ್ಶನ ನೀಡುವಳು. ಅವಳಿಗೆ ಪ್ರತಿನಿತ್ಯವೂ ತಮ್ಮ ಮನೆಯಲ್ಲಿಯೇ ಉಳಿಯಲು ಪ್ರಾರ್ಥನೆ ಮಾಡಬೇಕು.


ಉದಯವಾಹಿನಿ ಚಿತ್ರ

**ಮಂತ್ರಜಪದ ಪದ್ಧತಿ :** ಗುರುಗಳು ಯಾವುದೇ ದೇವಿಯ ಮಂತ್ರವನ್ನು ಕೊಟ್ಟಿದ್ದರೂ, ಅದನ್ನು ಪ್ರತಿದಿನ 1 ಮಾಲೆ ಜಪವನ್ನು ರಕ್ತಚಂದನದ ಮಾಲೆಯಿಂದ ಮಾಡಬೇಕು. ಎರಡು ಮಂತ್ರಜಪಗಳಲ್ಲಿ ಸ್ವಲ್ಪ ಅಂತರ 'ವನ್ನು ಇಡಬೇಕು. ಜಪವನ್ನು ಮಾಡುವಾಗ ನಾನೇ ಅವ್ಯಯ ಅವಿನಾಶಿ ಭಗವತಿಯಾಗಿದ್ದೇನೆ, ಎಂಬ ಭಾವವನ್ನು ಇಟ್ಟುಕ್ಕೊಳ್ಳಬೇಕು.

ಎರಡು ಮಂತ್ರ ಜಪಗಳಲ್ಲಿನ ಅಂತರವನ್ನು ಎಷ್ಟು ಹೆಚ್ಚಿಗೆ ಇಡಲು ಸಾಧ್ಯವಾಗುತ್ತದೆಯೋ, ಅಷ್ಟು ಹೆಚ್ಚಿಗೆ ಇಡಬೇಕು, ಇದರಿಂದ ಭಾವವೃದ್ಧಿಯಾಗುತ್ತದೆ ಮತ್ತು ತಾನು ಸ್ವತಃ ಜಗದಂಬೆಯಾಗಿದ್ದೇನೆ ಎಂಬ ಅನುಭೂತಿ ಬರುತ್ತದೆ. ಶಕ್ತಿ-ಉಪಾಸಕರು ಇದೇರೀತಿ ಉಪಾಸನೆಯನ್ನು ಮಾಡಿ ಅನುಭೂತಿಯನ್ನು ಪಡೆಯುತ್ತಿರುತ್ತಾರೆ; ಆದರೆ ಅವರು ವಿನಿಯೋಗ, ನ್ಯಾಸ, ಮುದ್ರೆ ಮುಂತಾದ ಕಠಿಣ ಕ್ರಿಯೆಗಳನ್ನು ಮೊದಲು ಮಾಡುತ್ತಾರೆ.

ಭಗವತಿಯ ಸಾನ್ನಿಧ್ಯವನ್ನು ಪ್ರಾಪ್ತ ಮಾಡಿಕೊಂಡು ಸಂಪೂರ್ಣ ದೇಹವನ್ನು ಮಂತ್ರ ಮಯಗೊಳಿಸಿ ಅವರು ಈ ಉಪಾಸನೆಯನ್ನು ಮಾಡುತ್ತಾರೆ. ನವಾರ್ಣ ಮಂತ್ರದ ದೀಕ್ಷೆಯನ್ನು ಪಡೆದಿದ್ದರೆ, ಅದನ್ನು ಪ್ರತಿದಿನ 1 ಸಾವಿರ ಸಲ ಪಠಿಸಬೇಕು. ದೀಕ್ಷೆ ಪಡೆಯದಿರುವವರು, ಮಂತ್ರದ ಉತ್ಕೀಲನ ಮತ್ತು ಸಂಜೀವನ ಕ್ರಿಯೆಗಳನ್ನು ಮೊದಲು ಮಾಡಿ ನಂತರ ಜಪ ಮಾಡಬೇಕು. ನವರಾತ್ರಿಯಲ್ಲಿ ನವನಾಥ ಪಂಥದವರು ನವನಾಥರ ಉಪಾಸನೆಯನ್ನು ಮಾಡುತ್ತಾರೆ.

# ಬಿನ್ನಿಪೇಟೆ, ಇಟಿಎ ಮಾಲ್ ಬಳಿ ಕಾಂಪೌಂಡ್ ಗೋಡೆ ತೆರವು

• ಉದಯವಾಹಿನಿ ಬೆಂಗಳೂರು

ನಗರದಲ್ಲಿ ನಿನ್ನೆ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಕೆಲವೆಡೆ ಸಮಸ್ಯೆಯಾಗಿದ್ದು, 15 ಮರಗಳು ಹಾಗೂ 44 ಮರದ ರೆಂಬೆ-ಕೊಂಬೆಗಳು ಧರೆಗುರುಳಿವೆ. ಪಾಲಿಕೆಯ ನಿಯಂತ್ರಣ ಕೊಠಡಿ ತಂಡಗಳು ಹಾಗೂ ಮರ ತೆರವು ತಂಡಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಿ ತೆರವು ಕಾರ್ಯಾಚರಣೆಯನ್ನು ನಡೆಸುತ್ತಿದ್ದಾರೆ.

**ಬಿನ್ನಿಪೇಟೆ, ಇಟಿಎ ಮಾಲ್ ಬಳಿ ಕಾಂಪೌಂಡ್ ಗೋಡೆ ತೆರವು ಕಾರ್ಯಾಚರಣೆ:** ಪಶ್ಚಿಮ ವಲಯದ ಪಾರ್ಕ್ ವ್ಯೂವ್ ಅಪಾರ್ಟ್ಮೆಂಟ್‌ನ 7 ಅಡಿ ಎತ್ತರದ ಕಾಂಪೌಂಡ್ ಗೋಡೆ, ಸುಮಾರು 10 ಅಡಿ ಅಷ್ಟು ಉದ್ದದ ಗೋಡೆ ಬಿದ್ದಿದ್ದು, ಪಾಲಿಕೆ ಅಧಿಕಾರಿಗಳು ಖುದ್ದು ಸ್ಥಳದಲ್ಲಿದ್ದು, ಅವರ ನೇತೃತ್ವದಲ್ಲಿ ಪಾಲಿಕೆ ಹಾಗೂ ಅಪಾರ್ಟ್ಮೆಂಟ್‌ನ ಸಿಬ್ಬಂದಿ ಸೇರಿ ಗೋಡೆಯ ಭಗ್ನಾವಶೇಷಗಳ ತೆರವು ಕಾರ್ಯಾಚರಣೆಯನ್ನು ನಡೆಸಲಾಗುತ್ತಿದೆ.

ಇಟಿಎ ಮಾಲ್ ಬಳಿ ಕಾಪೌಂಡ್ ಗೋಡೆ ಕುಸಿದಿರುವಂತಹ ಅವಶೇಷ ಗಳನ್ನು ಶೀಘ್ರವಾಗಿ ತೆರವುಗೊಳಿಸಿ ದಿಗ್ಬಂದನದಲಿದ್ದ ನಿವಾಸಿಗಳಿಗೆ ಒಡಾಡಲು ಅವಕಾಶ ಮಾಡಿಕೊಡಲಾಗಿದೆ.


ಉದಯವಾಹಿನಿ ಚಿತ್ರ

**ಪಾಲಿಕೆಯ ನಿಯಂತ್ರಣ ಕೊಠಡಿ ತಂಡಗಳು ಮರ ತೆರವು**

**ಕೇಂದ್ರೀಯ ವಿಹಾರ ಅಪಾರ್ಟ್ಮೆಂಟ್ ಜಲಾವೃತ:** ಯಲಹಂಕ ವಲಯದ ಕೇಂದ್ರೀ ಯ ವಿಹಾರ ಅಪಾರ್ಟ್ಮೆಂಟ್‌ನ ಸುಮಾರು 50 ಅಡಿ ಕಾಂಪೌಂಡ್ ಗೋಡೆ ಕುಸಿದು ಬಿದ್ದಿರುವ ಕಾರಣ, ಯಲಹಂಕ ಕೆರೆ ಹಾಗೂ ಅಪಾರ್ಟ್ಮೆಂಟ್ ಮಧ್ಯೆಯಿರುವ ಖಾಲಿ ಜಾಗದಲ್ಲಿ ನಿಂತಿದ್ದ ನೀರು ಏಕಾಕಾಕಿ ಅಪಾರ್ಟ್ಮೆಂಟ್ ಒಳಗೆ ನುಗ್ಗಿದೆ. ರಾತ್ರಿ ಸುಮಾರು 4 ಅಡಿ ನೀರು ನಿಂತಿದ್ದು, ಪಾಲಿಕೆಯ ಗ್ಯಾಂಗ್ ಮ್ಯಾನ್ ತಂಡ, ಎಸ್.ಡಿ.ಆರ್. ಆಫ್, ಅಗ್ನಿಶಾಮಕ ತಂಡಗಳು ಸ್ಥಳದಲ್ಲಿದ್ದು, ಪಂಪ್ ಸೆಟ್‌ಗಳ ಮೂಲಕ ನೀರು ಹೊರಹಾಕುವ ಕೆಲಸ ಮಾಡ ಲಾಗುತ್ತಿದೆ. ಸದ್ಯ 1 ಅಡಿ ನೀರು ನಿಂತಿದ್ದು, ನೀರು ಹೊರ ಹಾಕುವ ಕಾರ್ಯ ಸಕ್ರಿಯ ವಾಗಿ ನಡೆಸಲಾಗುತ್ತಿದೆ.

ಯಲಹಂಕ ಕೆರೆಗೆ ಸುಮಾರು 10 ಕೆರೆಗಳ ನೀರು ಬರಲಿದ್ದು, ಯಲಹಂಕ ಕೆರೆಯಿಂದ ಜಕ್ಕೂರು ಕೆರೆಗೆ ನೀರು ಹೋಗಲಿದೆ. ಕೆರೆ ಭಾಗದಿಂದ 25 ಅಡಿ ಕಳಭಾಗದಲ್ಲಿ ಅಪಾರ್ಟ್ಮೆಂಟ್ ಇರುವ ಕಾರಣ ಹಾಗೂ ಗೋಡೆ ಕುಸಿದಿರುವ ಕಾರಣ ನೀರು ನಿಂತು ಜಲಾವೃತವಾಗಿದೆ.

ಗೋಡೆ ಕುಸಿದಿರುವ ಭಾಗದಲ್ಲಿ ಸ್ಯಾಂಡ್ ಬ್ಯಾಗ್ ಗಳನ್ನು ಅಳವಡಿಸಲಾಗುತ್ತಿದೆ.

ಅಪಾರ್ಟ್ಮೆಂಟ್‌ನಲ್ಲಿ ವಾಸಿಸುವ ನಿವಾಸಿಗಳಿಗೆ ತಿಂಡಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಸಂಜೆ ವೇಳೆಗೆ ನೀರು ಹೊರ ಹಾಕಿ ತ್ಯಾಜ್ಯವನ್ನು ತೆರವುಗೊಳಿಸುವ ಕಾರ್ಯ ಮಾಡಲಾಗುವುದು.

ಯಲಹಂಕ ವಲಯದ ಎಲ್ಲಾ ಹಿರಿಯ ಅಧಿಕಾರಿಗಳು/ಸಿಬ್ಬಂದಿ ವರ್ಗ ಸ್ಥಳದಲ್ಲಿದ್ದು, ತೆರವು ಕಾರ್ಯ ನಡೆಸುತ್ತಿದ್ದಾರೆ.

## ವಿಜಯನಗರದ ಮಧುವನದ ಬಳಿ ಮನೆಗೆ ನೀರು ನುಗ್ಗಿರಿವುದು

**ದಕ್ಷಿಣ ವಲಯ ವಿಜಯನಗರದ ಮಧುವನದ ಬಳಿ ರಾಜಕಾಲುವೆಯ ಬಳಿಯಿದ್ದ ಸ್ಯಾನಿಟರಿ ಲೈನ್ ನಲ್ಲಿ ನೀರು ಓವರ್ ಫ್ಲೋ ಆಗಿದ್ದು, ಸುಮಾರು 10 ಮನೆಗಳಿಗೆ ನೀರು ನುಗ್ಗಿರುತ್ತೆ. ಪಾಲಿಕೆ ಸಿಬ್ಬಂದಿ ಸ್ಥಳಕ್ಕೆ ತೆರಳಿ ಸಮಸ್ಯೆಯನ್ನು ಬಗೆಹರಿಸಲಾಗಿರುತ್ತದೆ. ಪಾಲಿಕೆ ವ್ಯಾಪ್ತಿಯ ಯಲಹಂಕ ವಲಯ, ಪಶ್ಚಿಮ ವಲಯ ಹಾಗೂ ದಕ್ಷಿಣ ವಲಯವಾದ 3 ವಲಯಗಳಲ್ಲಿ ಮಾತ್ರ ಕೆಲವೆಡೆ ಸಮಸ್ಯೆಯಾಗಿದ್ದು, ಇನ್ನುಳಿದ ವಲಯಗಳಲ್ಲಿ ಯಾವುದೇ ಪ್ರಮುಖ ಸಮಸ್ಯೆಗಳಾಗಿರುವುದಿಲ್ಲ.**

ಉದಯ ವಾಹಿನಿ

ದೇಶ/ವಿದೇಶ

ಸೋಮವಾರ
07 ಅಕ್ಟೋಬರ್ 2024 07

# ಟ್ರಂಪ್ ಸೋತರೆ ಅಮೆರಿಕಕ್ಕೆ ಇದೇ ಕೊನೆಯ ಚುನಾವಣೆ: ಎಲಾನ್ ಮಸ್ಕ್

## ಡೊನಾಲ್ಡ್ ಟ್ರಂಪ್ ಭಾಷಣದ ವೇಳೆ ವೇದಿಕೆಯಲ್ಲಿ ಕುಣಿದು ಕುಪ್ಪಳಿಸಿದ ಎಲಾನ್ ಮಸ್ಕ್, ಖಮೇನಿಗೆ ಪಾಠ ಕಲಿಸಲು ವಿಳಂಬ ಬೇಡ



**ಮತ ಹಾಕುವುದಕ್ಕಿಂತ ಮುಖ್ಯವಾದ ಸಂಗತಿ ಬೇರೆ ಯಾವುದೂ ಇಲ್ಲ**

**ಪೆನ್ಸಿಲ್ವೇನಿಯಾ:** ಅಮೆರಿಕ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಪೆನ್ಸಿಲ್ವೇನಿಯಾ ಪ್ರಚಾರದ ವೇಳೆ ಕೋಟ್ಯಧಿಪತಿ ಉದ್ಯಮಿ ಎಲಾನ್ ಮಸ್ಕ್ ಕುಣಿದು ಕುಪ್ಪಳಿಸುವ ಮೂಲಕ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಗೆ ಬೆಂಬಲ ಪ್ರದರ್ಶಿಸಿದ್ದಾರೆ.

ಜುಲೈನಲ್ಲಿ ಪ್ರಚಾರದ ವೇಳೆ ಟ್ರಂಪ್ ಮೇಲೆ ಹತ್ಯೆಯ ದಾಳಿ ನಡೆದ ಬಟ್ಲರ್ ಪ್ರದೇಶದ ಸ್ಥಳದಲ್ಲಿಯೇ ಈ ಪ್ರಚಾರ ಸಭೆ ನಡೆದಿದೆ. ಕಪ್ಪು ಬಣ್ಣದ ಮೇಕ್ ಅಮೆರಿಕಾ ಗ್ರೇಟ್ ಅಗೇನ್ (ಎಂಎಜಿಎ) ಟೋಪಿ ಧರಿಸಿದ್ದ ಮಸ್ಕ್, ಟ್ರಂಪ್ ಅವರು ವೇದಿಕೆ ಮೇಲೆ ಭಾಷಣ ಮಾಡುವಾಗ ಅವರ ಹಿಂಭಾಗದಲ್ಲಿ ಮೇಲೆ ಕೆಳಗೆ ಜಿಗಿದು ಟ್ರಂಪ್ ಬೆಂಬಲಿಗರ ಉತ್ಸಾಹವನ್ನು ಹೆಚ್ಚಿಸಿದರು. ರ್ಯಾಲಿ ಉದ್ದೇಶಿಸಿ ಮಾತನಾಡಿದ ಮಸ್ಕ್, ಟ್ರಂಪ್ ಅವರಿಗೆ ಮತ ಹಾಕುವುದಕ್ಕಿಂತ ಮುಖ್ಯವಾದ ಸಂಗತಿ ಬೇರೆ ಯಾವುದೂ ಇಲ್ಲ ಎಂದರು. ಒಂದು ವೇಳೆ ಟ್ರಂಪ್ ಗೆಲ್ಲದೆ ಹೋದರೆ, ಅಮೆರಿಕಕ್ಕೆ ಇದೇ ಕೊನೆಯ ಚುನಾವಣೆಯಾಗಲಿದೆ.

ಡೆಮಾಕ್ರಟಿಕ್ ಪಕ್ಷವು ಅಭಿ ವ್ಯಕ್ತಿ ಸ್ವಾತಂತ್ರ್ಯ, ಶಸ್ತ್ರಾಸ್ತ್ರ ಹಕ್ಕು ಸೇರಿದಂತೆ ಅಮೆರಿಕನ್ನರ ಹಕ್ಕುಗಳನ್ನು ಕಿತ್ತುಕೊಳ್ಳಲಿದೆ ಎಂದು ಆರೋಪಿಸಿದರು. ನನ್ನ ಪ್ರಕಾರ ಇದು ನಮ್ಮ ಜೀವಮಾನದಲ್ಲಿಯೇ ಅತ್ಯಂತ ಮಹತ್ವದ ಚುನಾವಣೆ. ಇದು ಯಾವುದೇ ಸಾಮಾನ್ಯ ಚುನಾವಣೆ ಅಲ್ಲ. ಸಂವಿಧಾನ ಉಳಿಸಲು ಅಧ್ಯಕ್ಷ ಟ್ರಂಪ್ ಗೆಲ್ಲಲೇಬೇಕು. ಅಮೆರಿಕದ ಪ್ರಜಾಪ್ರಭುತ್ವ ಉಳಿಸಲು ಅವರು ಗೆಲ್ಲಲೇಬೇಕು. ಇದು ಗೆಲ್ಲಲೇಬೇಕಾದ ಸನ್ನಿವೇಶ ಎಂದು ಹೇಳಿದರು. ಉತ್ತರ ಕೆರೊಲಿನಾದಲ್ಲಿ ಚುನಾವಣಾ ಪ್ರ ಚಾರ ಸಭೆಯಲ್ಲಿ ಮಾತನಾಡಿದ ಅಮೆರಿಕದ ಮಾಜಿ ಅಧ್ಯಕ್ಷ ಟ್ರಂಪ್, ಜಗತ್ತಿನ ಮೊದಲ ಶತ್ರುವೇ ಅಣ್ವಸ್ತ್ರಗಳು. ಮೊದಲು ಅವುಗಳನ್ನು ನಾಶಪಡಿ ಸಬೇಕು ಎಂಬ ನನ್ನ ಮಾತು ಸರಿಯಲ್ಲವೇ, ಎಂದು ಹೇಳಿದರು. ಇ ರಾನ್ ಅಣ್ವಸ್ತ್ರ ಕೇಂದ್ರಗಳ ಮೇಲೆ

### ಅಣ್ವಸ್ತ್ರ ಕೇಂದ್ರಗಳ ಮೇಲೆ ಮೊದಲು ದಾಳಿ ನಡೆಸಲಿ

**ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ಇರಾನ್ ಅಣ್ವಸ್ತ್ರ ಕೇಂದ್ರಗಳ ಮೇಲೆ ಇಸ್ರೇಲ್ ರಕ್ಷಣಾ ಪಡೆ ಮೊದಲು ದಾಳಿ ನಡೆಸಬೇಕು, ಎಂದು ಅಮೆರಿಕ ಅಧ್ಯಕ್ಷೀಯ ಚುನಾ ವಣೆಯ ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಸಲಹೆ ನೀಡಿದ್ದಾರೆ. ಮಧ್ಯ ಪ್ರಾಚ್ಯದಲ್ಲಿ ಆವರಿಸಿರುವ ಯುದ್ಧದ ಕಾರ್ಮೋಡದ ನಡುವೆ ಅಪ್ರಚೋದಿತ ದಾಳಿ ನಡೆಸಿರುವ ಇರಾನ್‌ಗೆ ಪಾಠ ಕಲಿಸಲು ಮೊದಲು ಟೆಹರಾನ್‌ನ ಅಣ್ವಸ್ತ್ರ ಕೇಂದ್ರಗಳನ್ನು ನಾಶಪಡಿಸಬೇಕು. ಪ್ರತಿದಾಳಿ ನಡೆಸುವುದೊಂದೇ ಇಸ್ರೇಲ್‌ಗೆ ಉಳಿದಿರುವ ಮಾರ್ಗ, ಎಂದು ಟ್ರಂಪ್ ಹೇಳಿದ್ದಾರೆ.**

ದಾಳಿ ನಡೆಸಲು ಅಮೆರಿಕ ಪರಿಶೀಲಿಸುತ್ತಿದೆ ಎಂಬ ಅಧ್ಯಕ್ಷ ಜೋ ಬೈಡನ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಟ್ರಂಪ್, ಏಕಾಏಕಿ ಅಣು ಕೇಂದ್ರಗಳ ಮೇಲೆ ದಾಳಿ ನಡೆಸುವುದಕ್ಕೆ ನನ್ನ ಬೆಂಬಲ ಇಲ್ಲ. ಆದರೆ, ಇಸ್ರೇಲ್ ಮೇಲೆ ನೂರಾರು ಕ್ಷಿಪಣಿ ದಾಳಿ ನಡೆಸಿದ ಇರಾನ್ ವಿರುದ್ಧ ಕ್ರಮ ಕೈಗೊಳ್ಳುವುದು ಅನಿವಾರ್ಯ, ಎಂದು ಪ್ರತಿಪಾದಿಸಿದರು.

ಎದುರಾಳಿಗಳನ್ನು ಮಟ್ಟ ಹಾಕುವ ಕಾರ್ಯವನ್ನು ಇಸ್ರೇಲ್ ಮಾಡಲಿದೆ. ಇರಾನ್ ನಡೆಸಿದ ದಾಳಿಗೆ ಪ್ರತ್ಯುತ್ತರ ಕೊಡುವುದಕ್ಕೆ ಇಸ್ರೇಲ್‌ಗೆ ಹಕ್ಕಿದೆ, ಎಂದು ಟ್ರಂಪ್ ಹೇಳಿದ್ದಾರೆ.

**ಇಸ್ರೇಲ್ ಮೌನದ ಆತಂಕ:** ಇರಾನ್ ಅಣ್ವಸ್ತ್ರ ಕೇಂದ್ರಗಳ ಮೇಲೆ ದಾಳಿಯ ಪ್ರಸ್ತಾಪ ಮಾಡಿದ ಜೋ ಬೈಡನ್ ಹೇಳಿಕೆಗೆ ಇಸ್ರೇಲ್ ಯಾವುದೇ ಪ್ರತಿ ಕ್ರಿಯೆ ನೀಡಿಲ್ಲ. ಅಣು ಕೇಂದ್ರಗಳ ಮೇಲೆ ದಾಳಿ ನಡೆ ಸುವುದಿಲ್ಲ ಎಂಬ ಭರವಸೆಯನ್ನೂ ನೀಡಿಲ್ಲ, ಎಂದು ಅಮೆರಿಕ ವಿದೇಶಾಂಗ ಇಲಾಖೆ ಹೇಳಿಕೆ ಬಿ ಡುಗಡೆ ಮಾಡಿದೆ. ಇರಾನ್ ಕ್ಷಿಪಣಿ ದಾಳಿ ಬಳಿಕ ಮೌ ನವಾಗಿರುವ ಇಸ್ರೇಲ್ ನಡೆ ಅಮೆರಿಕ ಸೇರಿದಂತೆ ಜಾಗತಿಕವಾಗಿ ಆತಂಕ ಮೂಡಿಸಿದೆ.

**ಇಸ್ರೇಲ್ ತೈಲಗಾರಗಳ ಮೇಲೆ ಕಣ್ಣು:** ಇರಾನ್ ಕ್ಷಿಪಣಿ ದಾಳಿಗೆ ಪ್ರತೀಕಾರ ಕೈಗೊಳ್ಳುವ ದುಸ್ಸಾಸಹಕ್ಕೆ ಇ ಸ್ರೇಲ್ ಕೈಹಾಕಿದರೆ ಪರಿಣಾಮ ಭೀಕರವಾಗಿರುತ್ತದೆ, ಎಂದು ಇರಾನಿಯನ್ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್‌ನ ಡೆಪ್ಯುಟಿ ಕ ಮಾಂಡರ್ ಅಲಿ ಫಡವಿ ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ಇಸ್ರೇಲ್ ನಮ್ಮ ಮೇಲೆ ದಾಳಿಗೆ ಮುಂದಾದರೆ ಯಹೂದಿ ದೇಶದ ತೈಲಗಾರಗಳು, ಗ್ಯಾಸ್ ಫೀಲ್ಡ್‌ಗಳ ಮೇಲೆ ದಾಳಿ ನಡೆಸುತ್ತೇವೆ. ಇರಾನ್ ವಿಶಾಲವಾದ ಆರ್ಥಿಕ ಕೇಂದ್ರಗಳನ್ನು ಹೊಂದಿದೆ. ಆದರೆ, ಕೇವಲ ಮೂರು ವಿದ್ಯುತ್ ಸ್ಥಾವರ, ಕೆಲವು ತೈಲ ಸಂಸ್ಕರಣಾಗಾರಗಳು ನಮ್ಮ ಮುಂದಿನ ಗುರಿಯಾಗಲಿವೆ ಎಂದು ಫಡವಿ ಎಚ್ಚರಿ ಸಿದ್ದಾರೆ.

**ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಪರ ಪ್ರಚಾರ ನಡೆಸಿರುವ ಖ್ಯಾತ ಉದ್ಯಮಿ ಎಲಾನ್ ಮಸ್ಕ್, ಮತ, ಮತ, ಮತ, ಹೋರಾಟ, ಹೋರಾಟ, ಹೋರಾಟ ಎಂದು ಟ್ರಂಪ್ ಮಾತನ್ನು ಉಚ್ಚರಿಸಿ, ಬೆಂಬಲಿಗರಲ್ಲಿ ಉತ್ಸಾಹ ತುಂಬಿದ್ದಾರೆ. ಟ್ರಂಪ್ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಬೆಂಬಲ ನೀಡುತ್ತಿದ್ದರೂ, ಅವರು ರ್‍ಯಾಲಿಯಲ್ಲಿ ಭಾಗವಹಿಸಿರುವುದು ಇದು ಮೊದಲ ಸಲವಾಗಿದೆ.**

# ಪ್ರವಾಹದಲ್ಲಿ ಒಂದೇ ಕುಟುಂಬದ 7 ಮಂದಿ ಸೇರಿ 10 ಜನರ ಸಾವು



**ಶಿಲ್ಲಾಂಗ್:** ಕಳೆದ 24 ಗಂಟೆಗಳಲ್ಲಿ ಮೇಘಾಲಯದ ದಕ್ಷಿಣ ಗಾರೋ ಹಿಲ್ಸ್ ಜಿಲ್ಲೆಯಲ್ಲಿ ಸುರಿದ ಭಾರೀ ಮಳೆಯಿಂದ ಉಂಟಾದ ಪ್ರವಾಹದಲ್ಲಿ ಒಂದೇ ಕುಟುಂಬದ ಏಳು ಮಂದಿ ಸೇರಿದಂತೆ ಕನಿಷ್ಠ 10 ಜನರು ಸಾವನ್ನಪ್ಪಿರುವ ಘಟನೆ ಸಂಭವಿಸಿದೆ. ದಾಲುವಿನ ಮೂವರು ಮತ್ತು ಹತಿಯಾಸಿಯಾ ಸಾಂಗಾದಿಂದ ಏಳು ಜನರು ಸಾವನ್ನಪ್ಪಿದ್ದಾರೆ. ಸತತ ಮಳೆಯಿಂದಾಗಿ ಜಿಲ್ಲೆಯ ಗಸುವಾಪಾರ ಪ್ರದೇಶದಲ್ಲಿ ಭೂಕುಸಿತ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ಎಸ್‌ಡಿಆರ್‌ಎಫ್‌ನ ಸಿಬ್ಬಂದಿಯನ್ನು ಅತ್ಯಂತ ಕೆಟ್ಟ ಪೀಡಿತ ಪ್ರದೇಶಗಳಲ್ಲಿ ಶೋಧ ಮತ್ತು ರ ಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಲು ನಿಯೋಜಿಸಲಾಗಿದೆ.ಮರುನಿರ್ಮಾಣ ಪ್ರಯತ್ನಗಳಿಗೆ ಬೈಲಿ ಸೇತುವೆ ತಂತ್ರಜ್ಞಾನವನ್ನು ಬಳಸಲು ಸಂಗಾ ಸಲಹೆ ನೀಡಿದರು, ಇದು ತ್ವರಿತ ಜೋಡಣೆ ಮತ್ತು ಸಾರಿಗೆಗೆ ಅನುವು ಮಾಡಿಕೊಡುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಶುಕ್ರವಾರ ತಡವಾಗಿ ಆರಂಭವಾದ ನಿರಂತರ ಮಳೆಯು ಗಾರೋ ಹಿಲ್ಸ್ ಪ್ರದೇಶದಾದ್ಯಂತ ವ್ಯಾಪಕ ಭೂಕುಸಿತ ಮತ್ತು ಹಠಾತ್ ಪ್ರವಾಹಗಳನ್ನು ಉಂಟುಮಾಡಿದೆ. ಇದರ ಪರಿಣಾಮವಾಗಿ ಒಟ್ಟು 10 ಸಾವುಗಳು ಸಂಭವಿಸಿವೆ ಮತ್ತು ಹಲವಾರು ಮಂದಿ ಗಾಯಗೊಂಡಿದ್ದಾರೆ.

ಇದೇ ರೀತಿಯ ಭೂಕುಸಿತ ಘಟನೆಗಳಿಂದಾಗಿ ಪಶ್ಚಿಮ ಗಾರೋ ಹಿಲ್ಸ್‌ನ ದಾಲುದಲ್ಲಿ ಮೂವರು ವ್ಯಕ್ತಿಗಳು ಪ್ರಾಣ ಕಳೆದುಕೊಂಡಿದ್ದಾರೆ. ಹೆಚ್ಚುತ್ತಿರುವ ಸಾವಿನ ಸಂಖ್ಯೆಗೆ ಪ್ರತಿಕ್ರಿಯೆಯಾಗಿ ಮುಖ್ಯಮಂತ್ರಿ ಕಾನ್ರಾಡ್ ಸಂಗಾ ಅವರು ಪರಿಸ್ಥಿತಿಯನ್ನು ನಿರ್ಣಯಿಸಲು ತುರ್ತು ಪರಿಶೀಲನಾ ಸಭೆಯನ್ನು ಕರೆ ದಿದ್ದಾರೆ. ಈ ಭೂಕುಸಿತ ಎಲ್ಲಾ 5 ಜಿಲ್ಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ, ಪಶ್ಚಿಮ ಗಾರೋ ಬೆಟ್ಟಗಳ ಮೇಲೆ ತೀವ್ರ ಪರಿಣಾಮ ಬೀರಿದೆ.

### ಪರಿಹಾರ ನೀಡಲು ಆದೇಶ

**ಭೂಕುಸಿತ ಸಂಭವಿಸಿದಾಗ ಏಳು ಜನರ ಕುಟುಂಬವು ದೂರದ ಹಳ್ಳಿಯಾದ ಹಟಿಯಾಸಿಯಾ ಸಾಂಗಾದಲ್ಲಿ ತಮ ಮನೆಯೊಳಗೆ ಇದ್ದರು. ಮೃತರಲ್ಲಿ ಮೂವರು ಅಪ್ರಾಪ್ತರು ಸೇರಿದ್ದಾರೆ. ಮುಖ್ಯಮಂತ್ರಿ ಕಾನ್ರಾಡ್ ಕೆ ಸಂಗಾ ಅವರು ಗಾರೋ ಹಿಲ್ಸ್‌ನ ಐದು ಜಿಲ್ಲೆಗಳ ಪರಿಸ್ಥಿತಿಯ ಕುರಿತು ಪರಿಶೀಲನಾ ಸಭೆ ನಡೆಸಿದ್ದಾರೆ. ಸಂಗಾ ಮೃತರ ಕುಟುಂಬಗಳಿಗೆ ಸಾಂತ್ವನ ಸೂಚಿಸಿ ತಕ್ಷಣವೇ ಪರಿಹಾರ ನೀಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.**

# ರಕ್ಷಣಾ ಸಾಧನಗಳ ರಫ್ತುದಾರರಲ್ಲಿ ಒಂದಾದ ಭಾರತ




**ಮುಂಬೈ:** ಭಾರತವು ಕಳೆದ ಹತ್ತು ವರ್ಷಗಳಲ್ಲಿ ರಕ್ಷಣಾ ಸಾಧನಗಳ ಪ್ರಮುಖ ರಫ್ತುದಾರರಲ್ಲಿ ಒಂದಾಗಿದೆ, ಆಮದು ಶೇ.5ರಿಂದ 10 ರಷ್ಟು ಇಳಿಯಲಿದೆ ಎಂದು ಡಿಆರ್‌ಡಿಒ ಅಧ್ಯಕ್ಷ ಸಮೀರ್ ವಿ ಕಾಮತ್ ಹೇಳಿದ್ದಾರೆ. ದೇಶದ ರಕ್ಷಣಾ ಆಮದುಗಳು ಕಡಿಮೆಯಾಗುತ್ತಿವೆ ಮತ್ತು ಕಳೆದ ವರ್ಷ ಬಜೆಟ್‌ನಲ್ಲಿ ಸುಮಾರು 90 ಪ್ರತಿಶತ ಸ್ಥಳೀಯ ವ್ಯವಸ್ಥೆಗಳಲ್ಲಿ ಬಳಸಲಾಗಿದೆ ಎಂದು ಕಾಮತ್ ತಿಳಿಸಿದ್ದಾರೆ. ಇಲ್ಲಿನ ಛತ್ರಪತಿ ಶಾಹು ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಮರಾಠವಾಡದಲ್ಲಿ ಆಯೋಜಿಸಿದ್ದ ಡಿಫೆನ್ಸ್ ಇನ್ನೋವೇಶನ್ ಚಾಲೆಂಜ್ ಫಾರ್ ಎಕ್ಸಲೆನ್ಸ್ ಸಮೇಳನ (ಡೈಸ್) ಉದ್ಘಾಟಿಸಿ ಅವರು ಮಾತನಾಡಿದರು. ಹತ್ತು ವರ್ಷಗಳ ಹಿಂದೆ, ನಾವು ರಕ್ಷಣಾ ವ್ಯವಸ್ಥೆಗಳಲ್ಲಿ ಆಮದುದಾರರಲ್ಲಿ ಮುಂಚೂಣಿಯಲ್ಲಿದ್ದೆವು ಆದರೆ ಕಾಲ ಬದಲಾಗಿದೆ ಕಳೆದ ವರ್ಷದ ಅಂಕಿಅಂಶಗಳನ್ನು ನೋಡಿದರೆ, ನಮ ಬಂಡವಾಳದಲ್ಲಿ ಸುಮಾರು 90 ಪ್ರತಿಶತವನ್ನು ಸ್ವದೇಶಿ ವ್ಯವಸ್ಥೆಗಳಿಗೆ ಬಳಸಲಾಗಿದೆ. ನನಗೆ ವಿಶ್ವಾಸವಿದೆ ಇನ್ನು ಕೆಳವೇ ವರ್ಷದಲ್ಲಿ ಆಮದು ಪ್ರಮಾಣ ಅತ್ಯಲ್ಪವಾಗಿರುತ್ತವೆ ಎಂದರು. ಈ ನಡುವೆ 10 ವರ್ಷಗಳಲ್ಲಿ ಭಾರತವು ರಕ್ಷಣಾ ಸಾಧನಗಳನ್ನು ರಫ್ತು ಮಾಡುವ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿದೆ ಎಂದು ಅವರು ಹೇಳಿದರು. ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಭಾರತ 2028 ರ ವೇಳೆಗೆ 50,000 ಕೋಟಿ ಮತ್ತು 2035 ರ ವೇಳೆಗೆ 1 ಲಕ್ಷ ಕೋಟಿ ರೂಪಾಯಿ ಮೌಲ್ಯದ ರಫ್ತು ಸಾಧಿಸುವ ಗುರಿಯನ್ನು ಹೊಂದಿದೆ ಎಂದರು.

ರಕ್ಷಣೆಗೆ ಸಂಬಂಧಿಸಿದ ಸಂಶೋಧನೆಗೆ ಖರ್ಚು ಹೆಚ್ಚು ಮಾಡುತ್ತಿದ್ದೇವೆ ನಿಜ . ಆದರೆ, ನಾವು ಇನ್ನೂ ಅಭಿವೃದ್ಧಿ ಹೊಂದಿದ ದೇಶವಾಗಿಲ್ಲ, ಮತ್ತು ಇತರ ಆದ್ಯತೆಗಳಿವೆ. ನಾವು ತಂತ್ರಜ್ಞಾನದಲ್ಲಿ ಹೆಚ್ಚು ಹೂ ಡಿಕೆ ಮಾಡಬೇಕು ಎಂದು ಅವರು ಹೇಳಿದರು. ಇನ್ನೋವೇಶನ್ ಚಾಲೆಂಜ್‌ಗೆ ಅರ್ಜಿಗಳು ಅಕ್ಟೋಬರ್ 31 ರ ವರೆಗೆ ತೆರೆದಿರುತ್ತವೆ ಮತ್ತು ಅಂತಿಮ ಸುತ್ತು ಡಿಸೆಂಬರ್‌ನಲ್ಲಿ ನಡೆಯಲಿದೆ ಎಂದು ಮ್ಯಾಜಿಕ್‌ನ ನಿರ್ದೇಶಕ ಪ್ರಸಾದ್ ಕೋಕಿಲ್ ತಿಳಿಸಿದರು.

# ತನ್ನದೇ ಭದ್ರತೆಗೆ ಹಿಂದೂ ಸಮಾಜ ಒಂದಾಗಬೇಕು: ಭಾಗವತ್ ಕರೆ



**ರಾಜಸ್ಥಾನ:** ಹಿಂದೂ ಸಮಾಜವು ತನ್ನದೇ ಆದ ಭದ್ರತೆಗಾಗಿ ಭಾಷೆ, ಜಾತಿ ಮತ್ತು ಪ್ರಾಂತ್ಯದ ಭಿನ್ನಾಭಿಪ್ರಾಯ ಮತ್ತು ವಿವಾದಗಳನ್ನು ತೊಡೆದುಹಾಕುವ ಮೂಲಕ ಒಂದಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ಆರೆಸ್‌ಎಸ್ ಸಂಘಚಾಲಕ್ ಮೋಹನ್ ಭಾಗವತ್ ಕರೆ ನೀಡಿದ್ದಾರೆ. ಬರನ್ ನಗರದ ಕೃಷಿ ಉಪಜ್ ಮಂಡಿಯಲ್ಲಿ ಆರೆಸ್‌ಎಸ್ ಸ್ವಯಂಸೇವಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನಡವಳಿಕೆಯ ಶಿಸ್ತು, ರಾಜ್ಯದ ಕಡೆಗೆ ಕರ್ತವ್ಯ ಮತ್ತು ಗುರಿ-ಆಧಾರಿತ ಗುಣವನ್ನು ಹೊಂದಿರುವುದು ಸಮಾ ಜಕ್ಕೆ ಅವಶ್ಯಕವಾಗಿದೆ.ಹಿಂದೂ ಸಮಾಜವು ತನ್ನ ಭದ್ರತೆಗಾಗಿ ಭಾಷೆ, ಜಾತಿ ಮತ್ತು ಪ್ರಾಂತ್ಯದ ಭಿನ್ನಾ ಭಿಪ್ರಾಯ ಮತ್ತು ವಿವಾದಗಳನ್ನು ತೊಡೆದುಹಾಕುವ ಮೂಲಕ ಒಂದಾಗಬೇಕು ಎಂದರು. ಸಮಾಜವು ಸಂಘಟನೆ, ಸದ್ಭಾವನೆ ಮತ್ತು ಅನ್ಯೋನ್ಯತೆಯ ಅಭ್ಯಾಸವನ್ನು ಹೊಂದಿರಬೇಕು. ನಡವಳಿಕೆಯ ಶಿಸ್ತು, ರಾಜ್ಯ ಮತ್ತು ಕರ್ತವ್ಯ ಸಮಾಜದಲ್ಲಿ ಗುರಿ ಹೊಂದುವ ಗುಣವು ನನ್ನಿಂದ ಮತ್ತು ನನ್ನ ಕುಟುಂಬದಿಂದ ಮಾತ್ರ ಅಗತ್ಯವಾಗಿದೆ, ಬದಲಿಗೆ ನಾವು ಸಮಾಜದ ಬಗ್ಗೆ ಕಾಳಜಿ ವಹಿಸುವ ಮೂಲಕ ನಮ ಜೀವನದಲ್ಲಿ ದೇವರನ್ನು ಸಾಧಿಸಬೇಕು ಎಂದು ಸಲಹೆ ಮಾಡಿದರು. ಸಮಾಜದಲ್ಲಿ ಸಂಘಟನೆ, ಸದ್ಭಾವನೆ, ಆತೀಯತೆ ಇರುವಂತೆ ಮಾಡಬೇಕು.

ಭಾರತವು ಹಿಂದೂ ರಾಷ್ಟ್ರ ಎಂದು ಪುನರುಚ್ಚರಿಸಿದ ಭಾಗವತ್, ಹಿಂದೂ ಎಂಬ ಪದವನ್ನು ಇಲ್ಲಿ ವಾಸಿಸುವ ಎಲ್ಲಾ ಪಂಗಡಗಳ ಜನರಿಗೆ ಬಳಸಲಾಗಿದೆ ಎಂದು ಹೇಳಿದರು, ನಾವು ಪ್ರಾಚೀನ ಕಾಲದಿಂದಲೂ ಇಲ್ಲಿ ವಾಸಿಸುತ್ತಿದ್ದೇವೆ, ಆದರೆ ಹಿಂದೂ ಎಂಬ ಹೆಸರು ನಂತರ ಬಂದಿತು. ಇಲ್ಲಿ ವಾಸಿಸುವ ಭಾರತದ ಎಲ್ಲಾ ಪಂಗಡಗಳಿಗೆ ಹಿಂ ದೂ ಬಳಸಲಾಯಿತು. ಹಿಂದೂಗಳು ಎಲ್ಲರನ್ನೂ ತಮ ವರೆಂದು ಪರಿಗಣಿಸುತ್ತಾರೆ ಮತ್ತು ಎಲ್ಲರನ್ನು ಸ್ವೀಕ ರಿಸುತ್ತಾರೆ. ಹಿಂದೂ ರಾಷ್ಟ್ರ ಮತ್ತು ಇಲ್ಲಿ ವಾಸಿಸುವ ಎಲ್ಲಾ ಪಂಗಡಗಳ ಜನರಿಗೆ ಹಿಂದೂ ಎಂಬ ಪದವನ್ನು ಬಳಸಲಾಗಿದೆ. ಭಾರತವು ಹಿಂದೂ ರಾಷ್ಟ್ರವಾಗಿದೆ, ನಾವು ಪ್ರಾಚೀನ ಕಾಲದಿಂದಲೂ ಇಲ್ಲಿ ವಾಸಿಸುತ್ತಿದ್ದೇವೆ, ಆದರೆ ಹಿಂದೂ ಎಂಬ ಹೆಸರು ನಂತರ ಬಂದಿತು, ಇಲ್ಲಿ ವಾಸಿಸುವ ಭಾರತದ ಎಲ್ಲಾ ಪಂಗಡಗಳಿಗೆ ಹಿಂದೂ ಎಂದು ಬಳಸಲಾಗುತ್ತಿತ್ತು. ಹಿಂದೂಗಳು ಎಲ್ಲರನ್ನು ತಮವರೆಂದು ಪರಿಗಣಿಸುತ್ತಾರೆ ಮತ್ತು ಎಲ್ಲರನ್ನು ಸ್ವೀಕರಿಸುತ್ತಾರೆ.

ಹಿಂದೂ ನಾವು ಎಂದು ಹೇಳುತ್ತಾರೆ. ಸರಿ ಮತ್ತು ನಿಮ ಸ್ಥಳದಲ್ಲಿ ನೀವು ಸಹ ಸರಿಯಾಗಿರುತ್ತೀರಿ ಎಂದು ಅಭಿಪ್ರಾಯಪಟ್ಟರು. ಆರೆಎಸ್‌ಎಸ್ ಕೆಲಸವು ಯಾಂತ್ರಿಕವಲ್ಲ ಆದರೆ ಚಿಂತನೆ ಆಧಾರಿತವಾಗಿದೆ ಮತ್ತು ಆರೆಸ್‌ಎಸ್ ಮಾಡಿದ ಕೆಲಸಕ್ಕೆ ಹೋಲಿಸಬಹುದಾದ ಯಾವುದೇ ಕೆಲಸ ಜಗತ್ತಿನಲ್ಲಿ ಇಲ್ಲ ಎಂದು ಅವರು ಉಲ್ಲೇಖಿಸಿದ್ದಾರೆ. ಸಂಘಕ್ಕೆ, ಮೌಲ್ಯಗಳು ಗುಂಪಿನ ನಾಯಕನಿಂದ ಸ್ವಯಂಸೇವಕನಿಗೆ ಮತ್ತು ಅವರಿಂದ ಸ್ವಯಂಸೇವಕರ ಕುಟುಂಬ ಸದಸ್ಯರಿಗೆ ಹೋಗುತ್ತದೆ. ಇದು ಸಂಘದಲ್ಲಿ ವ್ಯಕ್ತಿತ್ವ ವಿಕಸನದ ವಿಧಾನವಾಗಿದೆ. ಬಲಪಂಥೀಯ ಸಂಘಟನೆಯಾದ ಆರ್‌ಎಸ್‌ಎಸ್ ಮಾಡುತ್ತಿರುವ ಕಾರ್ಯವನ್ನು ಶ್ಲಾಘಿಸಿದ ಅವರು, ಅದರ ಕೆಲಸ ಕೇವಲ ಯಾಂತ್ರಿಕವಾಗಿರದೆ ಚಿಂತನೆ ಆಧಾರಿತವಾಗಿದೆ ಎಂದು ಹೇಳಿದರು. ಸಂಘಕ್ಕೆ, ಮೌಲ್ಯಗಳು ಗುಂಪಿನ ನಾಯಕನಿಂದ ಸ್ವಯಂಸೇವಕನಿಗೆ ಮತ್ತು ಅವರಿಂದ ಸ್ವಯಂಸೇವಕರ ಕುಟುಂಬ ಸದಸ್ಯರಿಗೆ ಹೋಗುತ್ತದೆ ಎಂದು ಅವರು ಹೇಳಿದರು. ಇದು ಸಂಘದಲ್ಲಿ ವ್ಯಕ್ತಿತ್ವ ವಿಕಸನದ ವಿಧಾನವಾಗಿತ್ತು ಎಂದು ಭಾಗವತ್ ಸೇರಿಸಿದರು.

ಸಂಘದ ಕೆಲಸವು ಯಾಂತ್ರಿಕವಲ್ಲ ಆದರೆ ಚಿಂತನೆ ಆಧಾರಿತವಾಗಿದೆ. ಜಗತ್ತಿನಲ್ಲಿ ಸಂಘದ ಕೆಲ ಸಕ್ಕೆ ಹೋಲಿಸಬಹುದಾದ ಕೆಲಸವಿಲ್ಲ. ಸಂಘವನ್ನು ಯಾರೊಂದಿಗೂ ಹೋಲಿಸಲು ಸಾಧ್ಯವಿಲ್ಲ.

ಸಂ ಘದಿಂದ, ಮೌಲ್ಯಗಳು ಗುಂಪಿನ ನಾಯಕನಿಗೆ, ಗುಂಪಿನ ನಾಯಕನಿಂದ ಸ್ವಯಂಸೇವಕನಿಗೆ ಮತ್ತು ಸ್ವ ಯಂಸೇವಕನಿಂದ ಕುಟುಂಬಕ್ಕೆ ಹೋಗುತ್ತದೆ. ಇದು ಸಂಘದಲ್ಲಿ ವ್ಯಕ್ತಿತ್ವ ವಿಕಸನದ ವಿಧಾನವಾಗಿದೆ ಎಂದು ಅವರು ಹೇಳಿದರು.

> **ನಡವಳಿಕೆಯ ಶಿಸ್ತು, ರಾಜ್ಯದ ಕಡೆಗೆ ಕರ್ತವ್ಯ, ಗುರಿ-ಆಧಾರಿತ ಗುಣ ಸಮಾಜದಲ್ಲಿ ಅಗತ್ಯ. ಸಮಾಜವು ನಾನು, ನನ್ನ ಕುಟುಂಬದಿಂದ ಮಾತ್ರ ಮಾಡಲ್ಪಟ್ಟಿಲ್ಲ; ಬದಲಾಗಿ, ಸಮಾಜದ ಬಗ್ಗೆ ಸರ್ವ ತೋಮುಖ ಕಾಳಜಿಯನ್ನು ತೆಗೆದುಕೊಳ್ಳುವ ಮೂಲಕ ನಾವು ನಮ ಜೀವನದಲ್ಲಿ ದೇವರನ್ನು ಸಾಧಿಸಬೇಕು**
> –ಮೋಹನ್ ಭಾಗವತ್
> ಆರ್‌ಎಸ್‌ಎಸ್ ಸಂಘಚಾಲಕ

# ಲೆಬನಾನ್‌ನಲ್ಲಿ ನಿಲ್ಲದ ಇಸ್ರೇಲ್ ಆಕ್ರಮಣ

**ಬೈರೂತ್ ಮೇಲೆ ಕ್ಷಿಪಣಿ ದಾಳಿ**

**ಬೈರೂತ್:** ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿಕೊಂಡು ಲೆಬನಾನ್‌ನಲ್ಲಿ ಇಸ್ರೇಲ್ ನಡೆಸುತ್ತಿರುವ ದಾಳಿ ಭಾನುವಾರವೂ ಮುಂದುವರಿದಿದೆ. ಬೈರೂತ್‌ನ ದಕ್ಷಿಣ ಉಪನಗರದ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದೆ. ಈ ನಡುವೆ ಕದನ ವಿರಾಮಕ್ಕೆ ಇಸ್ರೇಲ್ ಮೇಲೆ ಒತ್ತಡ ಹಾಕಬೇಕು ಎಂದು ಲೆಬನಾನ್ ಪ್ರಧಾನಿ ನಜೀಬ್ ಮಿಕಾಟಿ ಅಂತರ ರಾಷ್ಟ್ರೀಯ ಸಮುದಾಯಕ್ಕೆ ಮನವಿ ಮಾಡಿದ್ದಾರೆ. ವಾಯುದಾಳಿಯ ಪರಿಣಾಮ ಆಕಾಶದಲ್ಲಿ ಬೆಂಕಿಯ ಉಂಡೆಗಳು ಕಾಣಿಸಿಕೊಂಡಿದ್ದು, ಬೈರೂತ್ ನಗರವನ್ನು ಹೊಗೆ ಆವರಿಸಿಕೊಂಡಿತ್ತು. ಹಿಜ್ಬುಲ್ಲಾ ಬಂಡುಕೋರರ ಗಟ್ಟಿ ನೆಲೆಯಾಗಿರುವ ದಕ್ಷಿಣ ಬೈರೂತ್ ಮೇಲೆ 30ಕ್ಕೂ ಅಧಿಕ ಕ್ಷಿಪಣಿಗಳ ಮೂಲಕ ದಾಳಿ ನಡೆಸಲಾಗಿದೆ.

ದಾಳಿಯಲ್ಲಿ ಒಂದು ಪೆಟ್ರೋಲ್ ಬಂಕ್ ಹಾಗೂ ವೈದ್ಯಕೀಯ ಸರಬರಾಜು ಉಗ್ರಾಣದ ಮೇಲೂ ದಾಳಿ ನಡೆದಿದೆ. 'ದಾಳಿಯ ವೇಳೆ ಭೂಕಂಪವಾದಂತಾಯಿತು' ಎಂದು ಅಂಗಡಿ ಮಾಲೀಕ 60 ವರ್ಷದ ಮೆಹದಿ ಝುತರ್ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ದಾಳಿಯಿಂದಾಗಿ ಬೈರೂತ್‌ನ ಜನವಸತಿ ಪ್ರದೇಶದ ಮೇಲೆ ಭಾರಿ ಪ್ರಮಾಣದ ಬೆಂಕಿಯುಂಡೆಗಳು ಕಾಣಿಸಿಕೊಂಡವು. ಅದರ ಬೆನ್ನಲ್ಲೇ ಭಾರಿ ಸ್ಫೋಟದ ಸದ್ದು ಕೇಳಿ ಬಂತು. ಇಡೀ ಪ್ರದೇಶ ಹೊಗೆಯಿಂದ ಆವೃತವಾಗಿತ್ತು. ನಾಗರಿಕರಿಗೆ ಆಗುವ ಸಂಭವನೀಯ ಹಾನಿಯನ್ನು ತಪ್ಪಿಸಲು ಶಸ್ತ್ರಾಸ್ತ್ರ ಸಂಗ್ರಹ ಸೌಲಭ್ಯಗಳು ಮತ್ತು ಮೂಲಸೌಕರ್ಯ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಬೈರೂತ್ ಉಪನಗರದ ಸಬ್ರಾ ಪ್ರದೇಶದಲ್ಲಿ ಕೈಯಲ್ಲಿ ಚೀಲಗಳನ್ನು ಹಿಡಿದುಕೊಂಡಿರುವ ನೂರಾರು ಜನ ಕಾಲ್ನಡಿಗೆ ಹಾಗೂ ದ್ವಿಚಕ್ರ ವಾಹನಗಳ ಮೂಲಕ ಪಲಾಯನ ಮಾಡುವ ದೃಶ್ಯಗಳೂ ಕಂಡು ಬರುತ್ತಿವೆ. ಇನ್ನೊಂದೆಡೆ ಗಾಜಾದಲ್ಲೂ ಇಸ್ರೇಲ್ ಪಡೆಗಳ ಆಕ್ರಮಣ ಮುಂದುವರಿದಿದ್ದು, ಉತ್ತರ ಗಾಜಾದ ಜಬಾಲಿಯಾ ಪ್ರದೇಶದಲ್ಲಿ ವಾಯು ದಾಳಿ ನಡೆಸಿದೆ.

ಅಲ್ಲಿ ಹಮಾಸ್ ಬಂಡುಕೋರರು ಮತ್ತೆ ಪುನರ್ ನಿರ್ಮಾಣದಲ್ಲಿ ತೊಡಗಿದ್ದರಿಂದ ದಾಳಿ ನಡೆಸಿದ್ದಾಗಿ ಇಸ್ರೇಲ್ ತಿಳಿಸಿದೆ. ಅಲ್ಲದೇ ಅಕ್ಟೋಬರ್ 7ರಂದು ಹಮಾಸ್ ದಾಳಿಗೆ ಒಂದು ವರ್ಷ ತುಂಬಲಿದ್ದು, ಭಾರಿ ಮುನ್ನೆಚ್ಚರಿಕೆಯಿಂದ ಇರುವುದಾಗಿ ಇಸ್ರೇಲ್ ತಿಳಿಸಿದೆ. ಹಮಾಸ್‌ನ ಈ ಅಪ್ರಚೋದಿತ ದಾಳಿಯೇ ಇಸ್ರೇಲ್-ಪ್ಯಾಲೆಸ್ಟೀನ್ ಯುದ್ಧಕ್ಕೆ ಮುನ್ನುಡಿ ಬರೆದಿತ್ತು.

# ಹರಿಯಾಣದಲ್ಲಿ ಸಿಎಂ ಸ್ಥಾನಕ್ಕೆ ಪೈಪೋಟಿ ಶುರು



**ಚಂಡೀಗಢ:** ಮತಗಟ್ಟೆ ಸಮೀಕ್ಷೆಗಳು ಕಾಂಗ್ರೆಸ್ ಪರ ಬರುತ್ತಿದ್ದಂತೆ ಕೈ ಪಾಳಯದಲ್ಲಿ ಈಗಲೇ ಹಲವು ನಾಯಕರು ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ಆರಂಭಿಸಿದ್ದಾರೆ. ಹರಿಯಾಣದ 90 ವಿಧಾನಸಭಾ ಸ್ಥಾನಗಳಿಗೆ ಶನಿವಾರ ಮತದಾನ ನಡೆದಿದ್ದು, ಒಂದು ದಶಕದ ನಂತರ ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಸ್ಪಷ್ಟ ಜನಾದೇಶ ಪಡೆದು ಅಧಿಕಾರ ಹಿಡಿಯುವುದು ಖಚಿತ ಎಂದು ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಇಂಡಿಯಾ ಟುಡೇ ಆಕ್ಸಿಸ್ ಮೈ ಇಂಡಿಯಾ ಪ್ರಕಾರ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ 90ರಲ್ಲಿ 59 ಸ್ಥಾನಗಳನ್ನು, ಬಿಜೆಪಿ ನೇತೃತ್ವದ ಎನ್‌ಡಿಎಎ ಮೈತ್ರಿಕೂಟ 21 ಸ್ಥಾನಗಳನ್ನು ಪಡೆಯುವ ನಿರೀಕ್ಷೆಯಿದೆ.

ಧ್ರುವ್ ರಿಸರ್ಚ್ ಪ್ರಕಾರ, ರಾಜ್ಯದಲ್ಲಿ ಇಂಡಿಯಾ ಮೈತ್ರಿ ಕೂಟ 57 ಸ್ಥಾನಗಳನ್ನು ಮತ್ತು ಎನ್‌ಡಿಎ ಮೈತ್ರಿಕೂಟ 27 ಸ್ಥಾನಗಳನ್ನು ಪಡೆಯುವ ನಿರೀಕ್ಷೆಯಿದೆ. ಅಲ್ಲದೆ, ಇತರೆ ಪಕ್ಷಗಳು 0ರಿಂದ 6 ಸ್ಥಾನಗಳನ್ನು ಪಡೆಯುವ ನಿರೀಕ್ಷೆಯಿದೆ. ಸಿಎನ್‌ಎನ್ 24ನ ಚುನಾವಣೋತ್ತರ ಸಮೀಕ್ಷೆಯ ಪ್ರಕಾರ, ಇಂಡಿಯಾ ಮೈತ್ರಿಕೂಟವು 59 ಸ್ಥಾನಗಳನ್ನು ಮತು ಮೈತ್ರಿಕೂಟವು ರಾಜ್ಯದಲ್ಲಿ 21 ಸ್ಥಾನಗಳನ್ನು ಪಡೆಯುವ ನಿರೀಕ್ಷೆಯಿದೆ. ಅಲ್ಲದೆ ಇತರೆ ಪಕ್ಷಗಳು 10 ಸ್ಥಾನ ಪಡೆಯುವ ನಿರೀಕ್ಷೆ ಇದೆ. ಎಕ್ಸಿಟ್ ಪೋಲ್ ಕಾಂಗ್ರೆಸ್ ಪರ ಬರುತ್ತಿದ್ದಂತೆ ಕೈ ಪಾಳಯದಲ್ಲಿ ಈಗಲೇ ಹಲವು ನಾಯಕರು ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ತೆರೆಮರೆಯಲ್ಲಿ ಶುರು ಮಾಡಿದ್ದಾರೆ.


**ಭೂಪಿಂದರ್ ಸಿಂಗ್ ಹೂಡಾ:** ಸಿಎಂ ಪಟ್ಟಿಯಲ್ಲಿ ಕೇಳಿ ಬರುತ್ತಿರುವ ಮೊದಲ ಹೆಸರು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ ಅವರದ್ದು. ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಿದ್ದಾರೆ. ಇದಲ್ಲದೇ 2005ರಿಂದ 2014ರವರೆಗೆ ಎರಡು ಬಾರಿ ಸಿಎಂ ಆಗಿದ್ದರು. ಮುಖ್ಯಮಂತ್ರಿ ಸ್ಥಾನದ ಫೈಟ್ ಬಗ್ಗೆ ಮಾತನಾಡಿದ ಅವರು, ನಾನು ಇನ್ನೂ ನಿವೃತ್ತಿ ಆಗಿಲ್ಲ, ರಾಜ್ಯದಲ್ಲಿ ಕಾಂಗ್ರೆಸ್ ಮಾತ್ರ ಸರ್ಕಾರ ರಚನೆ ಮಾಡಲಿದೆ, ಇದಲ್ಲದೇ ಮುಖ್ಯಮಂತ್ರಿ ಯಾರಾಗಬೇಕೆಂದು ಪಕ್ಷದ ಹೈಕ ಮಾಂಡ್ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ

**ಶೈಲಜಾ ಸುಂದರಿ:** ಸಿಎಂ ರೇಸ್‌ನಲ್ಲಿರುವ ಮತ್ತೋರ್ವ ಪ್ರಬಲ ಪೈಪೋಟಿಯ ಹೆಸರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಪ್ರಧಾನ ಕಾರ್ಯದರ್ಶಿ ಮತ್ತು ಸಿರ್ಸಾದ ಸಂಸದೆ ಕುಮಾರಿ ಶೈಲಜಾ ಅವರು. ಇವರು ಪ್ರಮುಖ ದಲಿತ ನಾಯಕಿಯಾಗಿದ್ದು, ಗಾಂಧಿ ಕುಟುಂಬಕ್ಕೆ ತುಂಬಾ ಆಪ್ತರೂ ಆಗಿದ್ದಾರೆ.

ಮನಮೋಹನ್ ಸಿಂಗ್ ಅವರ ಆಡಳಿತಾವಧಿಯ ಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಪ್ರವಾಸೋದ್ಯಮ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದ ಇವರು ತಮಗೆ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಸಿಎಂ ರೇಸ್ ಬಗ್ಗೆ ತಮ ಹಕ್ಕೊತ್ತಾಯವನ್ನು ಮಂಡಿಸಿದ ಕುಮಾರಿ ಶೈಲಜಾ ಅವರು, ಕಾಂಗ್ರೆಸ್ ನನ್ನ ಅನುಭವ ಮತ್ತು ಪಕ್ಷದ ಬಗ್ಗೆ ನನ್ನ ಪ್ರಶ್ನಾತೀತ ನಿಷ್ಠೆಯನ್ನು ತಿರಸ್ಕರಿಸಲು ಸಾಧ್ಯವಿಲ್ಲ, ನಾನು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತೆ ಮತ್ತು ಯಾವಾಗಲೂ ಹಾಗೆಯೇ ಇರುತ್ತೇನೆ. ಕಾಂಗ್ರೆಸ್‌ನಲ್ಲಿ ಸಿಎಂ ನಿರ್ಧಾರವನ್ನು ಪಕ್ಷ ತೆಗೆದುಕೊಳ್ಳುತ್ತದೆ ಎಂಬುದು ಎಲ್ಲರಿಗೂ ತಿಳಿದಿದೆ. ಅದನ್ನು ಹೈಕಮಾಂಡ್ ಮಾಡುತ್ತದೆ ಎಂದು ಹೇಳಿದ್ದಾರೆ.

# ಮಸೀದಿಯ ಒಳಗಿನಿಂದ ಗಾಯಾಳುಗಳನ್ನ ಹೊರ ತೆಗೆಯೋದೇ ಹರಸಾಹಸ

## ಗಾಜಾಪಟ್ಟಿಯಲ್ಲಿ ಹಮಾಸ್ ಉಗ್ರ ನೆಲೆಯಾಗಿದ್ದ ಮಸೀದಿ, ಇಸ್ರೇಲ್ ಬಾಂಬ್ ದಾಳಿಗೆ 21 ಮಂದಿ ಸಾವು



**ದಾಳಿ ನಡೆಸಿದ್ದಾಗಿ ಸಮರ್ಥನೆ**

**ಇಸ್ರೇಲ್:** ಗಾಜಾಪಟ್ಟಿಯಲ್ಲಿ ನಿರಾಶ್ರಿತರ ಶಿಬಿರವಾಗಿ ಪರಿವರ್ತನೆಯಾಗಿದ್ದ ಮಸೀದಿಯೊಂದರ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸಿದೆ. ಈ ದಾಳಿಯ ಲ್ಲಿ 21 ಮಂದಿ ಬಲಿಯಾಗಿದ್ದಾರೆ. ಗಾಜಾ ಪಟ್ಟಿಯ ದೀರ್ ಅಲ್ - ಬಾಲಾಹ್ ನಗರದ ಕೇಂದ್ರ ಭಾಗದ ಲ್ಲಿ ಇದ್ದ ಮಸೀದಿ ಮೇಲೆ ಈ ದಾಳಿ ನಡೆದಿದೆ. ಈ ಮ ಸೀದಿಯ ಒಳಗೆ ಹಮಾಸ್ ಉಗ್ರ ರ ಕಮಾಂಡ್ ಹಾಗೂ ನಿಯಂತ್ರಣ ಕೇಂದ್ರ ಇತ್ತು ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ. ಇದೇ ಕಾರಣಕ್ಕಾಗಿ ದಾಳಿ ನಡೆಸಿದ್ದಾಗಿ ಸಮರ್ಥನೆ ಮಾಡಿ ಕೊಂಡಿದೆ.

ಇನ್ನು ನಿರಾಶ್ರಿತರ ಶಿಬಿರವಾಗಿ ಬದಲಾಗಿದ್ದ ಮಸೀದಿಯೇ ಧ್ವಂಸವಾದ ಕಾರಣ ನೂರಾರು ನಿರಾಶ್ರಿತರಿಗೆ ಸ್ಥಳಾವಕಾಶ ಕಲ್ಪಿಸೋದೇ ಸವಾಲಾಗಿ ಪರಿಣಮಿಸಿದೆ. ಈ ನಡುವೆ, ಇಸ್ರೇಲ್ ಸೇನೆ ಸ್ಪಷ್ಟನೆ ನೀಡಿದ್ದು, ಹಮಾಸ್ ಉಗ್ರರ ನೆಲೆಗಳ ಮೇಲೆ ತಾನು ನಿಖರ ದಾಳಿ ನಡೆಸುತ್ತಿದ್ದು, ಈ ಮೂಲಕ ಜನ ಸಾಮಾನ್ಯರ ಸಾವನ್ನು ತಡೆಯುವ ಪ್ರಯತ್ನ ಮಾಡುತ್ತಿರೋದಾಗಿ ಹೇಳಿದೆ.

**ಇಸ್ರೇಲ್ ಮೇಲೆ ಹಮಾಸ್ ದಾಳಿಗೆ 1 ವರ್ಷ:** ಅ. 7 ರಂದು ಇಸ್ರೇಲ್ ಮೇಲೆ ನೂರಾರು ಹಮಾಸ್ ಉಗ್ರರು ದಾಳಿ ನಡೆಸಿದ್ದರು. ಈ ಕರಾಳ ಘಟನೆಗೆ 1 ವರ್ಷ ಆಗಲಿರುವ ಮುನ್ನಾ ದಿನವೇ ಈ ದಾಳಿ ನಡೆದಿದೆ. ಈ ಮೂಲಕ ಇಸ್ರೇಲ್ - ಹಮಾಸ್ ಯು ದ್ಧ ಒಂದು ವರ್ಷ ಪೂರೈಸಿದಂತಾಗಿದೆ. ಒಂದು ವರ್ಷಗಳ ಅವಧಿಯಲ್ಲಿ ಗಾಜಾ ಪಟ್ಟಿಯಲ್ಲಿ ಸುಮಾರು 50 ಸಾವಿರ ಮಂದಿ ಸಾವನ್ನಪ್ಪಿದಂತಾಗಿದೆ. ಅಕ್ಟೋಬರ್ 7ರ ದಾಳಿಯ ಕಹಿ ನೆನಪಿನ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟರೆಸ್ ಕೂಡಾ ವಿಡಿಯೋ ಒಂದನ್ನು ಬಿಡುಗಡೆ ಮಾಡಿದ್ದು, ಹಿಂಸಾಚಾರದ ಕಹಿ ನೆನಪನ್ನು ಈ ವಿಡಿಯೋದಲ್ಲಿ ಬಿಂಬಿಸಲಾಗಿದೆ.

ಇಸ್ರೇಲ್ ಮೇಲೆ ಹಮಾಸ್ ಉಗ್ರರು ದಾಳಿ ನಡೆಸಿದ ಬೆನ್ನಲ್ಲೇ ಇಸ್ರೇಲ್ ಕೂಡಾ ಪ್ರತಿ ದಾಳಿ ನಡೆಸಿ ಗಾಜಾ ಪಟ್ಟಿಯಲ್ಲಿ ಹಮಾಸ್ ಉಗ್ರರ ನೆಲೆಗಳನ್ನು ಧ್ವಂಸ ಮಾಡುತ್ತಾ ಬಂದಿದೆ. ಈ ಸಮರದಲ್ಲಿ ಸಾವಿರಾರು ಪ್ಯಾಲಸ್ತೀನ್ ಪ್ರಜೆಗಳು ಸಾವನ್ನಪ್ಪಿದ್ದಾರೆ. ಈ ಹಿಂಸಾಚಾರ ನಿಲ್ಲಬೇಕು ಎಂದು ಆಗ್ರಹಿಸಿರುವ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟರೆಸ್ ಶಾಂತಿಯ ಸಂದೇಶ ಸಾರಿದ್ದಾರೆ.

### ಗಾಯಾಳುಗಳ ಆಕ್ರಂದನ

**ಇಸ್ರೇಲ್ ನಡೆಸಿದ ದಾಳಿಯಲ್ಲಿ 21 ಮಂದಿ ಬಲಿಯಾಗುವ ಜೊತೆಯಲ್ಲೇ ನೂರಾರು ಮಂದಿ ಗಾಯಗೊಂಡಿದ್ದಾರೆ. ಮಸೀದಿಯಲ್ಲಿ ಇದ್ದ ಗಾಯಾಳುಗಳನ್ನು ಸಮೀಪದ ಅಲ್ - ಅಕ್ಸಾ ಹುತಾತ್ಮರ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬಾಂಬ್ ದಾಳಿಯಿಂದ ಧ್ವಂಸಗೊಂಡ ಮಸೀದಿಯ ಒಳಗಿನಿಂದ ಗಾಯಾಳುಗಳನ್ನ ಹೊರ ತೆಗೆಯೋದೇ ಹರ ಸಾಹಸ ಆಗಿತ್ತು ಎಂದು ಆಸ್ಪತ್ರೆಯ ವಕ್ತಾರ ಮೊಹಮ್ಮದ್ ಬಸ್ಸಾಲ್ ಹೇಳಿದ್ದಾರೆ. ಬಹುತೇಕ ಗಾಯಾಳುಗಳಿಗೆ ಆಸ್ಪತ್ರೆಯ ಒಳಗೆ ಬೆಡ್ ಸಿಗದ ಕಾರಣ ಆಸ್ಪತ್ರೆಯ ಮುಂಭಾಗದ ಗೇಟ್ ಬಳಿಯಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ.**

**ಹಮಾಸ್ ಉಗ್ರರು ಜನ ವಸತಿ ಪ್ರದೇಶಗಳಲ್ಲಿ, ಮಸೀದಿ, ಆಸ್ಪತ್ರೆಗಳಲ್ಲೇ ತಮ್ಮ ನೆಲೆಗಳನ್ನು ಮಾಡಿಕೊಂಡಿರುವ ಕಾರಣ, ಇಸ್ರೇಲ್ ದಾಳಿ ನಡೆಸಿದ ವೇಳೆ ಉಗ್ರರ ಜೊತೆಯಲ್ಲೇ ಜನ ಸಾಮಾನ್ಯರ ಜೀವಕ್ಕೂ ಸಂಚಕಾರ ಬರುತ್ತಿದೆ. ಗಾಜಾ ಪಟ್ಟಿಯ ಮಸೀದಿಯೊಂದರಲ್ಲಿ ನಿರಾಶ್ರಿತರು ತಂಗಿದ್ದರು. ಇದೇ ಮಸೀದಿ ಒಳಗೆ ಹಮಾಸ್ ಉಗ್ರ ಸಂಘಟನೆಯ ಸದಸ್ಯರೂ ಇದ್ದರು ಎಂದು ಇಸ್ರೇಲ್ ಹೇಳಿದ್ದು, ಇವರ ವಿರುದ್ಧ ನಡೆದ ದಾಳಿ ವೇಳೆ ಜನ ಸಾಮಾನ್ಯರೂ ಬಲಿಯಾಗಿದ್ದಾರೆ.**

# ಮಿನಿ ನ್ಯೂಸ್

## ತಿರುಪತಿ ಅನ್ನಪ್ರಸಾದ ಕಲುಷಿತ ಆರೋಪ ತಳ್ಳಿ ಹಾಕಿದ ಟಿಟಿಡಿ

**ತಿರುಪತಿ:** ವೆಂಕಟೇಶ್ವರ ತಿರುಪತಿ ದೇವಸ್ಥಾನದ ಪ್ರಸಾದದಲ್ಲಿ ಕೀಟಗಳು ಕಂಡುಬಂದಿವೆ ಎಂಬ ಭಕ್ತರ ಹೇಳಿಕೆಯನ್ನು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ತಳ್ಳಿಹಾಕಿದೆ. ಮಧ್ಯಾಹ್ನ 1.30ಕ್ಕೆ ದೇವಸ್ಥಾನದಲ್ಲಿ ಊಟ ಬಡಿಸುತ್ತಿದ್ದಾಗ ಈ ಘಟನೆ ನಡೆದಿದ್ದು, ತನ್ನ ಮೊಸರು ಅನ್ನದಲ್ಲಿ ಮಿಲಿಪೈಡ್ ಕಂಡುಬಂದಿದೆ. ಈ ನಿರ್ಲಕ್ಷ್ಯ ಸ್ವೀಕಾರಾರ್ಹವಲ್ಲ ಮಕ್ಕಳು ಅಥವಾ ಇತರರು ಕಲುಷಿತ ಆಹಾರವನ್ನು ಸೇವಿಸಿದರೆ, ಸಂಭಾವ್ಯ ಆಹಾರ ವಿಷಕ್ಕೆ ಯಾರು ಹೊಣೆಗಾರರಾಗುತ್ತಾರೆ? ಎಂದು ಪ್ರಶ್ನಿಸಿದ್ದಾರೆ. ಟಿಟಿಡಿ ಈ ಆರೋಪಗಳನ್ನು ತಳ್ಳಿ ಹಾಕಿದ್ದು, ಅವುಗಳನ್ನು ಆಧಾರರಹಿತ ಮತ್ತು ಸುಳ್ಳು ಎಂದು ಹೇಳಿದೆ.

ಶ್ರೀವಾರಿ ದರ್ಶನಕ್ಕೆ ಆಗಮಿಸುವ ಸಾವಿರಾರು ಭಕ್ತರಿಗೆ ಬಿಸಿಯೂಟ ಅನ್ನ ಪ್ರಸಾದವನ್ನು ಟಿಟಿಡಿ ಸಿದ್ಧಪಡಿಸುತ್ತಿದ್ದು, ಆಹಾರದಲ್ಲಿ ಮಿಲಿಪೆ ಡ್ ಬೀದಿದ್ದೆ ಎಂಬುದು ಸುಳ್ಳು ಹೇಳಿಕೆಯಾಗಿದೆ. ಇದು ವೆಂಕಟೇಶ್ವರ ನ ಮೇಲಿನ ಭಕ್ತರ ನಂಬಿಕೆಯನ್ನು ದಾರಿ ತಪ್ಪಿಸುವ ಪ್ರಯತ್ನವಾಗಿದೆ ಮತ್ತು ಸಂಸ್ಥೆಯನ್ನು ದೂಷಿಸುವ ಸಾಧನವಾಗಿದೆ ಎಂದು ಟಿಟಿಡಿ ಹೇಳಿಕೊಂಡಿದೆ. ತಿರುಪತಿ ಲಡ್ಡುಗಳಲ್ಲಿ ಪ್ರಾಣಿಗಳ ಕೊಬ್ಬಿನಂಶವಿದೆ ಎಂಬ ಆರೋಪದ ಕಾರಣ ಸಿಬಿಐ ನೆರವಿನ ವಿಶೇಷ ತನಿಖಾ ತಂಡವು ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬಿನಂಶವನ್ನು ಪರಿಶೀಲಿಸುತ್ತಿದೆ. ಇದರ ಬೆನ್ನಲ್ಲೇ ಪ್ರಸಾದದಲ್ಲಿ ಕೀಟ ಬಿದ್ದಿದ್ದೆ ಎಂಬ ದೂರು ಬಂದಿದೆ.

## ನಾಚಿಕೆಯಾಗಬೇಕು; ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್‌ಗೆ ನೆತನ್ಯಾಹು ತಿರುಗೇಟು

**ಜೆರುಸಲೇಂ:** ಗಾಜಾ ಹಾಗೂ ಲೆಬನಾನ್ ಮೇಲಿನ ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಎಂಬ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರ ಹೇಳಿಕೆಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಇರಾನ್ ನೇತೃತ್ವದ ಕ್ರೂರ ಶಕ್ತಿಗಳ ವಿರುದ್ಧ ಇಸ್ರೇಲ್ ಹೋರಾಡುತ್ತಿರುವಾಗ, ಎಲ್ಲಾ ನಾಗರಿಕ ದೇಶಗಳು ಇಸ್ರೇಲ್ ಪರವಾಗಿ ದೃಢವಾಗಿ ನಿಲ್ಲಬೇಕು' ಎಂದು ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. 'ಆದರೂ, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್, ಇತರೆ ಪಾಶ್ಚಿಮಾತ್ಯ ನಾಯಕರು ಇಸ್ರೇಲ್ ವಿರುದ್ಧ ಶಸ್ತ್ರಾಸ್ತ್ರ ನಿರ್ಬಂಧಗಳಿಗೆ ಕರೆ ನೀಡುತ್ತಿದ್ದಾರೆ. ಅವರಿಗೆ ನಾಚಿಕೆಯಾಗಬೇಕು ಎಂದು ತಿರುಗೇಟು ನೀಡಿದ್ದಾರೆ. ಇರಾನ್ ಬೆಂಬಲಿತ ಉಗ್ರ ಸಂಘಟನೆಗಳ ವಿರುದ್ಧ ಇಸ್ರೇಲ್ ಹಲವಾರು ಪ್ರದೇಶಗಳಲ್ಲಿ ಸಂಘರ್ಷ ಮಾಡುತ್ತಿದೆ' ಎಂದು ಅವರು ಹೇಳಿದ್ದಾರೆ.

ಬಳಿಕ ನೆತನ್ಯಾಹು ಹೇಳಿಕೆಗೆ ಫ್ರಾನ್ಸ್ ನ ಕಚೇರಿ ಪ್ರತಿಕ್ರಿಯೆ ನೀಡಿದೆ. 'ಇಸ್ರೇಲ್‌ನ ಸ್ಥಿರ ಸ್ನೇಹಿತ' ಫ್ರಾನ್ಸ್ ಎಂದು ಹೇಳಿದೆ. ಆದರೆ ನೆತನ್ಯಾಹು ಅವರ ಹೇಳಿಕೆ ಎಲ್ಲೆ ಮೀರಿದೆ ಎಂದು ಹೇಳಿದೆ. ಏತನ್ಮಧ್ಯೆ ಮ್ಯಾಕ್ರನ್ ಹೇಳಿಕೆಯನ್ನು ಕತಾರ್ ಹಾಗೂ ಜಾರ್ಡನ್ ದೇಶಗಳು ಸ್ವಾಗತಿಸಿವೆ. ಈ ಮೊದಲು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಸಂದರ್ಶನದಲ್ಲಿ 'ಲೆಬನಾನ್ ಹೊಸ ಗಾಜಾ ಆಗಬಾರದು. ಲೆಬನಾನಿನಲ್ಲಿ ಸಂಘರ್ಷ ತಪ್ಪಿಸಲು ಆದ್ಯತೆ ನೀಡಬೇಕು' ಎಂದು ಹೇಳಿದ್ದರು. ಗಾಜಾದಲ್ಲಿ ಸಂಘರ್ಷವನ್ನು ತಡೆಯಲು ಇಸ್ರೇಲ್‌ಗೆ ಶಸ್ತ್ರಾಸ್ತ್ರ ಪೂರೈಕೆ ನಿಲ್ಲಿಸುವಂತೆಯೂ ಮ್ಯಾಕ್ರನ್ ಕರೆ ನೀಡಿದ್ದರು.

## ಗಾಜಾ ಸಂಘರ್ಷ: ಇಸ್ರೇಲ್‌ಗೆ ಶಸ್ತ್ರಾಸ್ತ್ರ ಪೂರೈಕೆ ನಿಲ್ಲಿಸುವಂತೆ ಕರೆ

**ಪ್ಯಾರಿಸ್:** ಗಾಜಾದಲ್ಲಿ ಸಂಘರ್ಷವನ್ನು ತಡೆಯಲು ಇಸ್ರೇಲ್‌ಗೆ ಶಸ್ತ್ರಾಸ್ತ್ರ ಪೂರೈಕೆಯನ್ನು ನಿಲ್ಲಿಸುವಂತೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಕರೆ ನೀಡಿದ್ದಾರೆ. ಲೆಬನಾನ್ ಮೇಲೆ ಭೂ ಕಾರ್ಯಾಚರಣೆಗೆ ಸೇನೆಯನ್ನು ಕಳುಹಿಸುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ನಿರ್ಧಾರವನ್ನು ಮ್ಯಾಕ್ರನ್ ಬಲವಾಗಿ ಖಂಡಿಸಿದ್ದಾರೆ.


ಗಾಜಾ ಬಿಕ್ಕಟ್ಟಿಗೆ ರಾಜಕೀಯ ಪರಿಹಾರ ಕಂಡುಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ನಾನು ಭಾವಿಸುತ್ತೇನೆ. ಗಾಜಾದಲ್ಲಿ ಸಂಘರ್ಷ ತಡೆ ಯಲು ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದನ್ನು ನಿಲ್ಲಿಸಬೇಕು' ಎಂದು ಅವರು ಹೇಳಿದ್ದಾರೆ. ಸಿನಿಮಾ ಫ್ರಾನ್ಸ್ ಶಸ್ತ್ರಾಸ್ತ್ರಗಳನ್ನು ಪೂ ರೈಕೆ ಮಾಡುತ್ತಿಲ್ಲ' ಎಂದು ಮ್ಯಾಕ್ರನ್ ಸ್ಪಷ್ಟಪಡಿಸಿದ್ದಾರೆ. ಕದನ ವಿರಾಮಕ್ಕೆ ಹಲವು ಬಾರಿ ಕರೆ ನೀಡಿರುವ ಹೊರತಾಗಿಯೂ ಗಾಜಾದಲ್ಲಿ ಸಂಘರ್ಷ ಮುಂದುವರಿಯುತ್ತಿರುವುದಕ್ಕೆ ಮ್ಯಾಕ್ರನ್ ಕಳವಳ ವ್ಯಕ್ತಪಡಿಸಿದ್ದಾರೆ.

ನಮ್ಮ ಕರೆಯನ್ನು ಕೇಳುತ್ತಿಲ್ಲ ಎಂದು ನಾ ನು ಭಾವಿಸುತ್ತೇನೆ. ಇದು ಇಸ್ರೇಲ್ ಭದ್ರತೆಯ ಎಡವಟ್ಟು ಕೂಡ ಆಗಿದೆ. ಯುದ್ಧವು ದ್ವೇಷವನ್ನು ಹರಡುತ್ತದೆ' ಎಂದು ಹೇಳಿದ್ದಾರೆ. ಗಾಜಾ, ಲೆಬನಾನಿನ ಮೇಲೆ ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಎಂಬ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರ ಹೇಳಿಕೆಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. 'ಅವರಿಗೆ ನಾಚಿಕೆಯಾಗಬೇಕು ಎಂದು ಹೇಳಿದ್ದಾರೆ.

## ಮುಂಬೈನ ಕಟ್ಟಡದಲ್ಲಿ ಬೆಂಕಿ ಏಳು ಮಂದಿ ಸಾವು

**ಮುಂಬೈ:** ಮುಂಬೈನ ಎರಡು ಅಂತಸ್ತಿನ ಅಂಗಡಿ ಮತ್ತು ವಸತಿ ಕಟ್ಟಡದಲ್ಲಿ ಭಾನುವಾರ ಬೆಳಿಗ್ಗೆ ಬೆಂಕಿ ಕಾಣಿಸಿಕೊಂಡು ಮೂವರು ಅಪ್ರಾಪ್ತರು ಸೇರಿದಂತೆ ಏಳು ಜನರು ಸಾವನ್ನಪ್ಪಿರುವ ಘಟನೆ ಸಂಭವಿಸಿದೆ. ಮೃತರನ್ನು ಪ್ಯಾರಿಸ್ ಗುಪ್ತಾ (7), ಮಂಜು ಪ್ರೇಮ್ ಗುಪ್ತಾ (30), ಅನಿತಾ ಗುಪ್ತಾ (39), ಪ್ರೇಮ್ ಗುಪ್ತಾ (30), ನರೇಂದ್ರ ಗುಪ್ತಾ (10), ವಿಧಿ ಚೇದಿರಾಮ್ ಗುಪ್ತಾ (15) ಮತ್ತು ಗೀತಾದೇವಿ ಧರಂದೇವ್ ಗುಪ್ತಾ (60) ಮೃತಪಟ್ಟ ದುರ್ದೈವಿಗಳು. ಚೆಂಬೂರ್ ಪ್ರದೇಶದ ಸಿದ್ಧಾರ್ಥ್ ಕಾಲೋನಿಯಲ್ಲಿ ಬೆಳಿಗ್ಗೆ 5.20 ಕ್ಕೆ ಈ ಘಟನೆ ನಡೆದಿದೆ. ಬೆಂಕಿ ಹೊತ್ತಿಕೊಳ್ಳಲು ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿಯು ನೆಲ ಮಹಡಿಯಲ್ಲಿನ ಅಂಗಡಿಯಲ್ಲಿನ ವಿದ್ಯುತ್ ವೈರಿಂಗ್ ಮತ್ತು ಅನುಸ್ಥಾಪನೆಗಳಿಗೆ ಸೀಮಿತವಾಗಿತ್ತು ಮತ್ತು ಮೇಲಿನ ಮಹಡಿಗೆ ವ್ಯಾಪಿಸಿದೆ. ಘಟನೆಯಲ್ಲಿ ಏಳು ಮಂದಿ ಗಾಯಗೊಂಡಿದ್ದರು. ತಕ್ಷಣವೇ ಅವರನ್ನು ರಾಜವಾಡಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಚಿಕಿತ್ಸೆ ಫಲಕಾರಿಯಾಗದೆ ಅವರೆಲ್ಲರೂ ಸಾವನ್ನಪ್ಪಿದ್ದಾರೆ. ಅಗ್ನಿಶಾಮಕ ವಾಹನಗಳು, ನೀರಿನ ಟ್ಯಾಂಕರ್‌ಗಳು ಮತ್ತು ಇತರ ಸಹಾಯವನ್ನು ಸ್ಥಳಕ್ಕೆ ಧಾವಿಸಲಾಯಿತು ಮತ್ತು ಬೆಳಿಗ್ಗೆ 9.15ರ ಹೊತ್ತಿಗೆ ಬೆಂಕಿಯನ್ನು ನಂದಿಸಲಾಗಿದೆ. ಕಟ್ಟಡದ ನೆಲ ಮಹಡಿಯಲ್ಲಿ ಅಂಗಡಿಗಳಿದ್ದು, ಮೇಲಿನ ಮಹಡಿಯಲ್ಲಿ ಮನೆಗಳಿದ್ದವು. ಬೆಂಕಿಯ ಜ್ವಾಲೆ ನೆಲಮಹಡಿಯ ಎಲೆಕ್ಟ್ರಿಕ್ ವೈರಿಂಗ್ ಮತ್ತು ಇತರೆ ಸಾಮಗ್ರಿಗಳಿಗೆ ಹೊತ್ತಿಕೊಂಡು ಬಳಿಕ ಎರಡನೇ ಮಹಡಿಗೆ ವ್ಯಾಪಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



# ಭಾಗ್ಯಲಕ್ಷ್ಮಿ ತಾಂಡವ್ ಪತ್ನಿಯ ಬೋಲ್ಡ್ ಅವತಾರ

ಸಂಗೀತಾ ಅವರು ಇನ್ನಷ್ಟು ಸಿನಿಮಾಗಳು ಮಾಡಬೇಕು ಎಂದು ಫ್ಯಾನ್ಸ್ ಕಮೆಂಟ್ ಮಾಡುತ್ತಿದ್ದಾರೆ. ಮಾತ್ರವಲ್ಲ ಸಂಗೀತಾ ಅವರು ಇನ್ನಷ್ಟು ಗ್ಲ್ಯಾಮರ್ ಆಗಿದ್ದಾರೆ. ಹಾಗೇ ಮತ್ತೆ ಕಮ್ ಬ್ಯಾಕ್ ಮಾಡಬೇಕು ಎಂದು ಕಮೆಂಟ್ ಮಾಡಿದ್ದಾರೆ.

ಸ್ಯಾಂಡಲ್‌ವುಡ್‌ನ ನಟಿ ಸಂಗೀತಾ ಭಟ್ ಆಗಾಗ ಹೊಸ ಫೋಟೋಶೂಟ್ ಮಾಡಿಸುತ್ತಲೇ ಇರುತ್ತಾರೆ. ಮಾತ್ರವಲ್ಲ ಫ್ಯಾಷನ್ ಐಕಾನ್ ಎಂದು ಅವರ ಫ್ಯಾನ್ಸ್ ಹೇಳುವುದುಂಟು. ಯಾವ ಪಾತ್ರಕ್ಕೆ ಯಾವ ರೀತಿ ಕಾಣುತ್ತೇನೆ ಅನ್ನೋದನ್ನ ತಿಳಿದುಕೊಳ್ಳಲು ಈ ರೀತಿಯ ಫೋಟೊ ಶೂಟ್‌ಗಳಲ್ಲಿ ಕಾಣಿಸಿಕೊಳ್ಳುತ್ತೇನೆ ಎಂದು ಹೇಳಿಕೊಂಡಿದ್ದರು. ಸಂಗೀತಾ ಅವರು ಭಾಗ್ಯಲಕ್ಷ್ಮೀ ಧಾರಾವಾಹಿಯ ತಾಂಡವ್ ಪಾತ್ರಧಾರಿಯ ಪತ್ನಿ. ಇದೀಗ ಬಿಳಿ ಬಣ್ಣದ ಉಡುಪಿನಲ್ಲಿ ಸಖತ್ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಸಕ್ರೀಯರಾಗಿರುತ್ತಾರೆ ಸಂಗೀತಾ. ಸಂಗೀತಾ ಭಟ್ ಸಿನಿಮಾಗಳಲ್ಲಿ ಹೆಚ್ಚಾಗಿ ಬೋಲ್ಡ್ ಪಾತ್ರ ನಿಭಾಯಿಸಿಲ್ಲ. ದಯವಿಟ್ಟು ಗಮನಿಸಿ ಸಿನಿಮಾದಲ್ಲಿ ವಸಿಷ್ಠ ಸಿಂಹ ಜೊತೆಗೆ ಅಭಿನಯಿಸಿದ್ರು. ಚಿತ್ರದ ಮರೆತೆ ಹೋದೇನು ಹಾಡಿನಲ್ಲಿ ಒಂದು ಇಂಟಿಮೇಟ ಸೀನ್ ಬರುತ್ತದೆ. ಅದರಲ್ಲಿ ಬೋಲ್ಡ್ ಆಗಿಯೇ ಅಭಿನಯಿಸಿದ್ದಾರೆ. ಬಿಟ್ಟರೆ ಹಲವು ಸಿನಿಮಾಗಳಲ್ಲಿ ಸಿಂಪಲ್ ಆಗಿಯೇ ಕಂಡಿದ್ದಾರೆ. ಡಾಲಿ ಧನಂಜಯ್ ನಟನೆಯ ಎರಡನೇಸಲ ಚಿತ್ರದಲ್ಲಿ ಸಂಗೀತಾ ಭಟ್ ಅಭಿನಯಿಸಿದ್ದರು. ಈ ಚಿತ್ರದ ಹಾಡಿನಲ್ಲೂ ಒಂದಷ್ಟು ರೋಮ್ಯಾಂಟಿಕ್ ಅನಿಸೋ ದೃಶ್ಯಗಳಿದ್ದವು. ಇದು ಬಿಟ್ರೆ, ಇದೀಗ ಹೆಚ್ಚಿನ ಧೈರ್ಯವನ್ನ ಹೊಸ ರೀತಿಯ ಫೋಟೋ ಶೂಟ್‌ಗಳಲ್ಲಿಯೇ ಸಂಗೀತಾ ಭಟ್ ಮಾಡುತ್ತಿದ್ದಾರೆ. ಸಂಗೀತಾ ಅವರ ಫ್ಯಾನ್ಸ್ ಕೂಡ ಆಗಾಗ ನಟಿಯ ಲುಕ್‌ಗೆ ಫಿದಾ ಆಗುತ್ತಲೇ ಇರುತ್ತಾರೆ. ಸಂಗೀತಾ ಭಟ್ ಈ ಹಿಂದೆ ಒಂದು ಫೋಟೋ ಶೂಟ್ ಮಾಡಿಸಿದ್ದರು. ಬೀಡಿ ಸೇದೋ ಲುಕ್ ಕೂಡ ಇತ್ತು. ಕಾರಣ, ಫೋಟೊ ಶೂಟ್‌ನ ಕಾನ್ಸೆಪ್ಟ್ ಹಾಗಿತ್ತು. ತಮ್ಮ ಪ್ರತಿ ಅಪ್‌ಡೇಟ್‌ಗಳನ್ನೂ ಸೋಷಿಯಲ್ ಮೀಡಿಯಾದಲ್ಲಿರೋ ಸಂಗೀತಾ ಭಟ್ ಪೇಜ್‌ನಲ್ಲಿ ಹಂಚಿಕೊಳ್ತಾನೇ ಇರ್ತಾರೆ.

# ಟ್ರೋಲಿಗರಿಗೆ ಪ್ರಿಯಾಮಣಿ ತಿರುಗೇಟು



ಕನ್ನಡದ ರಾಮ್, ಅಣ್ಣಾ ಬಾಂಡ್ ಸಿನಿಮಾಗಳ ನಟಿ ಪ್ರಿಯಾಮಣಿ ಅವರು ಸದ್ಯ ಬಾಲಿವುಡ್ ಚಿತ್ರಗಳಲ್ಲಿ ಬ್ಯುಸಿಯಾಗಿದ್ದಾರೆ. ಇದೀಗ ಸಂದರ್ಶನವೊಂದರಲ್ಲಿ ಅನ್ಯಧರ್ಮದವನ ಜೊತೆ ಮದುವೆಯಾಗಿದ್ದಕ್ಕೆ ನಟಿ ಎದುರಿದ ಟ್ರೋಲ್, ಕಾಮೆಂಟ್‌ಗಳ ಬಗ್ಗೆ ಮೌನ ಮುರಿದ್ದಾರೆ. ತಮಗೆ ಹುಟ್ಟುವ ಮಕ್ಕಳು ಮುಂದೊಂದು ದಿನ ಭಯೋತ್ಪಾದಕರಾಗುತ್ತಾರೆ ಎಂದು ಟೀಕಿಸಿದವರಿಗೆ ನಟಿ ತಕ್ಕ ಉತ್ತರ ಕೊಟ್ಟಿದ್ದಾರೆ. ನನಗೂ ಮುಸ್ತಫಾಗೂ ಹುಟ್ಟುವ ಮಕ್ಕಳು ಭಯೋತ್ಪಾದಕರು ಆಗುತ್ತಾರೆ ಎಂದು ಕೆಲವರು ಹೇಳಿದ್ದರು. ಟ್ರೋಲ್ ಮಾಡಿದ್ದರು ಎಂದು ಪ್ರಿಯಾಮಣಿ ಹೇಳಿದ್ದಾರೆ. ಮದುವೆಯಾಗುತ್ತಿರುವ ಬಗ್ಗೆ ಘೋಷಣೆಯಾದ ದಿನದಿಂದ ಈ ದ್ವೇಷ ಅಭಿಯಾನವು ಮದುವೆಯ ನಂತರವೂ ಮುಂದುವರೆಯಿತು ಎಂದು ನಟಿ ಹೇಳಿದ್ದಾರೆ. ನನ್ನ ಧಾರ್ಮಿಕ ನಂಬಿಕೆಯನ್ನೇ ಪ್ರಶ್ನಿಸುವ ರೀತಿಯಲ್ಲಿ ಈ ಸೈಬರ್ ದಾಳಿ ಮುಂದುವರೆದಿದೆ ಎಂದು ಪ್ರಿಯಾಮಣಿ ಸಂದರ್ಶನವೊಂದರಲ್ಲಿ ಮಾತನಾಡಿದ್ದಾರೆ. ಅನ್ಯಧರ್ಮದವನ ಜೊತೆಗಿನ ಮದುವೆಯಾಗಿದ್ದಕ್ಕೆ ಮತ್ತೆ ಧರ್ಮದ ಕುರಿತು ಟೀಕಿಸಿದವರಿಗೆ ನಾನು ಹುಟ್ಟು ಹಿಂದೂ ಎಂದು ಖಡಕ್ ಆಗಿ ಉತ್ತರಿಸಿದ್ದಾರೆ. ಕೆಟ್ಟ ಟ್ರೋಲ್‌ಗಳ ಬಗ್ಗೆ ನಾನು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ನಟಿ ಮಾತನಾಡಿದ್ದಾರೆ. ಅಂದಹಾಗೆ, ಮುಂಬೈ ಮೂಲದ ಮುಸ್ತಫಾ ರಾಜ್ ಅವರನ್ನು 2017ರಲ್ಲಿ ಪ್ರಿಯಾಮಣಿ ಮದುವೆಯಾದರು. ಹಲವು ವರ್ಷಗಳ ಡೇಟಿಂಗ್ ನಂತರ ಮದುವೆಯ ಮುದ್ರೆ ಒತ್ತಿದ್ದರು.

# ಬಿಡುಗಡೆಗೆ ಸಜ್ಜಾದ 'ಸಿಂಹರೂಪಿಣಿ' ಸಿನಿಮಾ



ಯಶ್ ಶೆಟ್ಟಿ, ಅಂಕಿತಾ ಗೌಡ, ಹರೀಶ್ ರಾಯ್, ನೀನಾಸಂ ಅಶ್ವತ್ಥ್, ದಿವ್ಯಾ ಆಲೂರು, ವಿಜಯ್ ಚೆಂಡೂರು, ಖುಷಿ ಬಸ್ರೂರು ಮುಂತಾದವರು 'ಸಿಂಹರೂಪಿಣಿ' ಸಿನಿಮಾದಲ್ಲಿ ನಟಿಸಿದ್ದಾರೆ. ಕಿನ್ನಾಳ್ ರಾಜ್ ಅವರು ನಿರ್ದೇಶನ ಮಾಡಿದ್ದಾರೆ. ಕೆ.ಎಂ. ನಂಜುಂಡೇಶ್ವರ ನಿರ್ಮಾಣ ಮಾಡಿದ ಈ ಸಿನಿಮಾ ಶೀಘ್ರದಲ್ಲೇ ಬಿಡುಗಡೆ ಆಗಲಿದೆ. ಸಿನಿಮಾದ ಕುರಿತು ಇಲ್ಲಿದೆ ಮಾಹಿತಿ..

ಕಿನ್ನಾಳ್ ರಾಜ್ ನಿರ್ದೇಶನದ 'ಸಿಂಹರೂಪಿಣಿ' ಸಿನಿಮಾ ಈಗ ಬಿಡುಗಡೆಗೆ ಸಿದ್ದವಾಗಿದೆ. ಶ್ರೀ ಮಾರಮ್ಮ ದೇವಿ ಕುರಿತ ಸಾಮಾಜಿಕ ಮತ್ತು ಭಕ್ತಿಪ್ರಧಾನ ಕಥೆ ಈ ಸಿನಿಮಾದಲ್ಲಿ ಇದೆ. ಸಿನಿಮಾ ಚೆನ್ನಾಗಿ ಮೂಡಿಬಂದಿದೆ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದೆ ಚಿತ್ರತಂಡ. ಕೆ.ಎಂ. ನಂಜುಂಡೇಶ್ವರ ಅವರು ಈ ಸಿನಿಮಾಗೆ ಕಥೆ ಬರೆದಿದ್ದಾರೆ. 'ಶ್ರೀ ಚಕ್ರ ಫಿಲ್ಮ್ಸ್' ಬ್ಯಾನರ್ ಮೂಲಕ ಬಂಡವಾಳ ಹೂಡಿದ್ದಾರೆ. ಕೆಜಿಎಫ್, ಸಲಾರ್ ಮುಂತಾದ ಸಿನಿಮಾಗಳಿಗೆ ಸೂಪರ್ ಹಿಟ್ ಹಾಡುಗಳನ್ನು ಬರೆದ ಕಿನ್ನಾಳ್‌ರಾಜ್ ಅವರು 'ಸಿಂಹರೂಪಿಣಿ' ಚಿತ್ರಕ್ಕೆ ನಿರ್ದೇಶನ ಮಾಡುವುದರ ಜೊತೆಗೆ ಚಿತ್ರಕಥೆ, ಸಂಭಾಷಣೆ ಮತ್ತು ಸಾಹಿತ್ಯ ಬರೆದಿದ್ದಾರೆ.

ಸಿಂಹರೂಪಿಣಿ' ಸಿನಿಮಾದ ಆಡಿಯೋ ಹಕ್ಕುಗಳು 'ಮಾಳು ನಿಪನಾಳ್' ಮ್ಯೂಸಿಕ್ ಸಂಸ್ಥೆಗೆ ಮಾರಾಟ ಆಗಿವೆ. ಈ ಸಿನಿಮಾದಲ್ಲಿ ಹಿರಿಯ ನಟ ಸುಮನ್ ಅಭಿನಯಿಸಿದ್ದಾರೆ. 'ಇಷ್ಟು ವರ್ಷಗಳ ವೃತ್ತಿ ಜೀವನದಲ್ಲಿ ಈ ಚಿತ್ರ ನನಗೆ ಬಹಳ ಖುಷಿ ನೀಡಿದೆ. ದೇವಿ ಇದ್ದಾರಾ ಎನ್ನುವ ಪ್ರಶ್ನೆಗೆ ನನ್ನ ಪಾತ್ರ ಉತ್ತರ ನೀಡಲಿದೆ' ಎಂದು ಅವರು ಹೇಳಿದ್ದಾರೆ. ಈ ಮೊದಲು ಸಿನಿಮಾದ ಪಾತ್ರಗಳ ಪರಿಚಯ ಮಾಡಿರುವ ಟೀಸರ್ ಬಿಡುಗಡೆ ಆಗಿತ್ತು. ನವರಾತ್ರಿ ಹಬ್ಬದ 2ನೇ ದಿನದಂದು ಸಾಂಗ್ಸ್ ಬಿಡುಗಡೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಈ ಪ್ರಯುಕ್ತ ಸುಮನ್ ಅವರು ಹೈದರಾಬಾದ್‌ನಿಂದ ಆಗಮಿಸಿದ್ದರು. '120ಕ್ಕೂ ಅಧಿಕ ಕಲಾವಿದರು ಚೆನ್ನಾಗಿ ಅಭಿನಯಿಸಿದ್ದಾರೆ. ಪ್ರೇಕ್ಷಕರು ಅಮ್ಮನ ಮಕ್ಕಳಾಗಿ ಚಿತ್ರಮಂದಿರಕ್ಕೆ ಬರಬೇಕು' ಎಂದು ನಿರ್ಮಾಪಕ ಕೆ.ಎಂ. ನಂಜುಡೇಶ್ವರ ಹೇಳಿದ್ದಾರೆ.

# ನಿದ್ರಾದೇವಿ Next Door ಸಿನಿಮಾಗೆ ಕುಂಬಳಕಾಯಿ ಪ್ರಾಪ್ತಿ

ಸುರಮ್ ಮೂವೀಸ್ ನಿರ್ಮಾಣದ ಯುವ ನಟ ಪ್ರವೀರ್ ಶೆಟ್ಟಿ ನಾಯಕನಾಗಿ ನಟಿಸಿರುವ 'ನಿದ್ರಾದೇವಿ Next Door ಸಿನಿಮಾದ ಚಿತ್ರೀಕರಣ ಮುಕ್ತಾಯಗೊಂಡಿದೆ. ರಾಜರಾಜೇಶ್ವರಿ ನಗರದಲ್ಲಿ ಕೊನೆಯ ಹಂತದ ಶೂಟಿಂಗ್ ಕಂಪ್ಲೀಟ್ ಮಾಡಿ ಕುಂಬಳಕಾಯಿ ಹೊಡೆಯಲಾಯಿತು. ಈ ವೇಳೆ, ಚಿತ್ರದ ಎಲ್ಲಾ ಕಲಾವಿದರು, ತಂತ್ರಜ್ಞರು ಹಾಗೂ ಕನ್ನಡ ಪರ ಹೋರಾಟಗಾರ ಪ್ರವೀಣ್ ಶೆಟ್ಟಿ ಕೂಡ ಭಾಗಿಯಾಗಿದ್ದರು. ಈ ಚಿತ್ರದಲ್ಲಿ ಪ್ರವೀರ್ ಶೆಟ್ಟಿ, ರಿಷಿಕಾ ನಾಯಕ್ ಜೋಡಿಯಾಗಿ ಕಾಣಿಸಿಕೊಂಡಿದ್ದು, 'ಬಿಗ್ ಬಾಸ್' ಖ್ಯಾತಿಯ ಶೈನ್ ಶೆಟ್ಟಿ ಹಾಗೂ ಶ್ರುತಿ ಹರಿಹರನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಸುಧಾರಾಣಿ, ಶ್ರೀವತ್ಸ, ಐಶ್ವರ್ಯಾ ಗೌಡ , ಅನೂಪ್, ಮಾಸ್ಟರ್ ಸುಜಯ್ ರಾಮ್, ಕಾರ್ತಿಕ್ ಪತ್ತಾರ್ ಮತ್ತು ಅನುರಾಗ್ ಪಾಟೀಲ್ ಸೇರಿದಂತೆ ಇತರರು ತಾರಾಬಳಗದಲ್ಲಿದ್ದಾರೆ. ಈ ಚಿತ್ರವನ್ನು ನಿರ್ಮಾಪಕರಾದ ಜಯರಾಮ್ ದೇವಸಮುದ್ರ ಅವರು ತಮ್ಮ ಸುರಮ್ ಮೂವೀಸ್ ಬ್ಯಾನರ್‌ನಡಿ ನಿರ್ಮಿಸಿದ್ದು, ಈ ಹಿಂದೆ ಇದೇ ಸಂಸ್ಥೆಯಲ್ಲಿ ರೇವ್ ಪಾರ್ಟಿ ಮತ್ತು ಎಂಗೇಜ್‌ಮೆಂಟ್ ಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ. 'ನಿದ್ರಾದೇವಿ Next Door ಚಿತ್ರವು ಅವರ ಬ್ಯಾನರ್‌ನಲ್ಲಿ ಬರುತ್ತಿರುವ ವಿಭಿನ್ನ ಚಿತ್ರವಾಗಿದೆ. ಅಂದುಕೊಂಡಂತೆ ಎಲ್ಲಾ ಶೆಡ್ಯೂಲ್ ಅದ್ಭುತವಾಗಿ ಮೂಡಿ ಬಂದಿದೆ ಎಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಡೈರೆಕ್ಟರ್ ಸುರಾಗ್ ಸಾಗರ್ ಮಾತನಾಡಿ, ಸಿನಿಮಾದ ಶೂಟಿಂಗ್ ಮುಗಿದಿದೆ. ಪೋಸ್ಟ್ ಪ್ರೊಡಕ್ಷನ್ ಶುರುವಾಗಿದೆ. ಬೆಂಗಳೂರಿನ HMTನಲ್ಲಿ ಒಂದು ಪ್ರತ್ಯೇಕ ಸೆಟ್‌ನಲ್ಲಿ ಚಿತ್ರದ ಒಂದು ಮುಖ್ಯ ಭಾಗವನ್ನು ಶೂಟ್ ಮಾಡಿದ್ದು, ಅದ್ಭುತವಾಗಿ ಈ ಚಿತ್ರವು ಮೂಡಿ ಬಂದಿದೆ ಎಂದು ತಿಳಿಸಿದರು.



# ಒಟಿಟಿಗೆ ಬಂತು ವಿನಯ್ ರಾಜ್‌ಕುಮಾರ್ ಪೆಪೆ ಸಿನಿಮಾ; ಆದ್ರೆ, ನಿಮಗೆ ನೋಡೋಕೆ ಆಗೋದಿಲ್ಲ!



ದುನಿಯಾ ವಿಜಯ್ ಕುಮಾರ್ ಈ ಹಿಂದೆ ಪೆಪೆ ಚಿತ್ರಕ್ಕೆ ಸಾಥ್ ಕೊಟ್ಟಿದ್ದರು. ವಿನಯ್ ರಾಜ್‌ಕುಮಾರ್ ಅಭಿನಯದ ಪೆಪೆ ಸಿನಿಮಾದ ಪ್ರಚಾರಕ್ಕೆ ಜೊತೆಗೆ ಆಗಿದ್ದರು. ವಿನಯ್ ರಾಜ್‌ಕುಮಾರ್ ಅವರು ಪೆಪೆ ಸಿನಿಮಾದಲ್ಲಿ ಸಖತ್ ರಗಡ್ ಆಗಿ ಕಂಡಿದ್ದರು. ಆಗಸ್ಟ್ 30 ರಂದು ತೆರೆ ಕಂಡಿದ್ದ ಈ ಸಿನಿಮಾ, ಮಿಶ್ರ ಪ್ರತಿಕ್ರಿಯ ಪಡೆದುಕೊಂಡಿತ್ತು. ಈ ಸಿನಿಮಾ ತೆರೆಗೂ ಬರುವ ಮುಂಚೆ ವಿನಯ್ ಅವರು ಯಾವತ್ತೂ ಮಾಸ್ ಅವತಾರದಲ್ಲಿ ಕಂಡಿರಲಿಲ್ಲ. ಇದೀಗ ಈ ಸಿನಿಮಾ ಒಟಿಟಿಗೆ ಲಗ್ಗೆ ಇಟ್ಟಿದೆ. ಪೆಪೆ ಚಿತ್ರದಲ್ಲಿ ವಿನಯ್ ರಾಜ್ ಕುಮಾರ್ ಮ್ಯಾನ್ಲಿ ಲುಕ್ ಅಲ್ಲಿಯೇ ಇದ್ದಾರೆ. ಪೆಪೆ ಸಿನಿಮಾದಲ್ಲಿ ವಿನಯ್ ರಾಜ್‌ಕುಮಾರ್ ಕಂಪ್ಲೀಟ್ ಚೇಂಜ್ ಆಗಿದ್ದರು. ಸೆಟಲ್ ಆಗಿಯೇ ನಟಿಸಿ ಪ್ರೇಕ್ಷಕರಿಗೆ ಥ್ರಿಲ್ ಮೂಡಿಸಿದ್ದರು. ತಮ್ಮ ಸಖತ್ ರಗಡ್ ಲುಕ್‌ನಿಂದಲೂ ಇಲ್ಲಿ ಗಮನ ಸೆಳೆದಿದ್ದರು. ಈ ಸಿನಿಮಾಗೆ ಶ್ರೀಲೇಶ್ ನಾಯರ್ ಅವರ ನಿರ್ದೇಶನವಿದೆ. ಇನ್ನು ಸಿನಿಮಾ ಬಿಡುಗಡೆಗೂ ಮುಂಚೆ ಟ್ರೈಲರ್ ಸಖತ್ ಸದ್ದು ಮಾಡಿತ್ತು. ಕಿಚ್ಚ ಸುದೀಪ್ ಅವರೂ ಕೂಡ ಟ್ರೈಲರ್‌ಗೆ ಮೆಚ್ಚುಗೆ ಹೊರ ಹಾಕಿದ್ದರು. ಇದೀಗ ಸಿನಿಮಾ ಒಟಿಟಿಗ ಬರುತ್ತಿದೆ. ಬರೋಬ್ಬರಿ 34 ದಿನಗಳ ಬಳಿಕ ಒಟಿಟಿಗೆ ಎಂಟ್ರಿ ಕೊಟ್ಟಿದೆ. ಅಮೇಜಾನ್ ಪ್ರೈಂ ಒಟಿಟಿಯಲ್ಲಿ ಈ ಸಿನಿಮಾ ವೀಕ್ಷಣೆಗೆ ಲಭ್ಯವಿದೆ. ಆದರೆ ಈ ಸಿನಿಮಾ ಭಾರತದ ವೀಕ್ಷಕರಿಗೆ ಸದ್ಯಕ್ಕೆ ಲಭ್ಯವಿಲ್ಲ ಎಂದು ವರದಿಯಾಗಿದೆ. ಅಮೆರಿಕಾ ಮತ್ತು ಯೂರೋಪ್‌ನಲ್ಲಿನ ಪ್ರೈಂ ಚಂದಾದಾರರಿಗೆ ಈ ಸಿನಿಮಾ ವೀಕ್ಷಣೆಗೆ ಸಿಗಲಿದೆ ಎನ್ನಲಾಗಿದೆ. ಭಾರತೀಯ ಪ್ರೈಂ ಚಂದಾದಾರರೂ ಈ ಸಿನಿಮಾ ಯಾವಾಗ ವೀಕ್ಷಣೆ ಮಾಡಬಹುದು ಎಂಬ ಮಾಹಿತಿ ತಂಡ ಹಂಚಿಕೊಂಡಿಲ್ಲ ಪೆಪೆ ಚಿತ್ರದಲ್ಲಿ ವಿನಯ್ ರಾಜ್‌ಕುಮಾರ್ ತುಂಬಾನೆ ರಫ್ ಆಗಿಯೇ ಕಾಣಿಕೊಂಡಿದ್ದಾರೆ. ಇದರ ಜೊತೆಗೆ ಈ ಒಂದು ಚಿತ್ರಕ್ಕೆ ಮೂವರು ಆಯಕ್ಷನ್ ಡೈರೆಕ್ಟರ್ ಇದ್ದಾರೆ. ಚೇತನ್ ಡಿಸೋಜಾ, ರವಿ ವರ್ಮ, ಡಿಫರಂಟ್ ಡ್ಯಾನಿ ಹೀಗೆ ಮೂವರ ಸಾಹಸ ನಿರ್ದೇಶನ ಇಲ್ಲಿದೆ. ಟ್ರೈಲರ್ ರಿಲೀಸ್ ಆದಾಗ ಸ್ಯಾಂಡಲ್‌ವುಡ್ ನಟರ ಸಾಥ್ ಇತ್ತು. ಪೂರ್ಣಚಂದ್ರ ತೇಜಸ್ವಿ ಸಂಗೀತ, ಅಭಿಷೇಕ್ ಜಿ ಕಾಸರಗೋಡು ಛಾಯಾಗ್ರಹಣ ನೀಡಿದ್ದಾರೆ. ಮನು ಶೇಡ್ಗಾರ್ ಸಂಕಲನವಿದೆ.

# ಟೀಂ ಇಂಡಿಯಾ ಪರ ಇಬ್ಬರು ಐಪಿಎಲ್ ಸ್ಟಾರ್‌ಗಳ ಪದಾರ್ಪಣೆ



**ಬಾಂಗ್ಲಾದೇಶ ತಂಡಗಳು ಮತ್ತೊಮ್ಮೆ ಮುಖಾಮುಖಿ**

ಎರಡು ಪಂದ್ಯಗಳ ಟೆಸ್ಟ್ ಸರಣಿಯ ನಂತರ ಇದೀಗ ಭಾರತ ಮತ್ತು ಬಾಂಗ್ಲಾದೇಶ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗಿವೆ. ಉಭಯ ತಂಡಗಳ ನಡುವೆ ಮೂರು ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯ ಇಂದು ಗ್ವಾಲಿಯರ್‌ನ ಮಾಧವರಾವ್ ಸಿಂಧಿಯಾ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿದೆ. ಈ ಪಂದ್ಯದೊಂದಿಗೆ ಬರೋಬ್ಬರಿ 14 ವರ್ಷಗಳ ನಂತರ ಗ್ವಾಲಿಯರ್‌ನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯವೊಂದು ನಡೆಯುತ್ತಿರುವುದು ವಿಶೇಷ ಸಂಗತಿಯಾಗಿದೆ. ಇನ್ನು ಈ ಪಂದ್ಯದ ಟಾಸ್ ಕೂಡ ಮುಗಿದಿದ್ದು, ಟಾಸ್ ಗೆದ್ದ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದ್ದಾರೆ. ಇದರ ಜೊತೆಗೆ ಉಭಯ ತಂಡಗಳ ಪ್ಲೇಯಿಂಗ್ 11 ಕೂಡ ಹೊರಬಿದ್ದಿದ್ದು, ಟೀಂ ಇಂಡಿಯಾ ಪರ ಇಬ್ಬರು ಆಟಗಾರರು ಚೊಚ್ಚಲ ಪಂದ್ಯವನ್ನಾಡಲು ಸಜ್ಜಾಗಿದ್ದಾರೆ.

**ಉಭಯ ತಂಡಗಳು:** ಟೀಂ ಇಂಡಿಯಾ: ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಅಭಿಷೇಕ್ ಶರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ನಿತೀಶ್ ಕುಮಾರ್ ರೆಡ್ಡಿ, ಹಾರ್ದಿಕ್ ಪಾಂಡ್ಯ, ರಿಯಾನ್ ಪರಾಗ್, ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್, ವರುಣ್ ಚಕ್ರವರ್ತಿ, ಅರ್ಷದೀಪ್ ಸಿಂಗ್, ಮಯಾಂಕ್ ಯಾದವ್. ಬಾಂಗ್ಲಾದೇಶ ತಂಡ: ನಜ್ಮುಲ್ ಹೊಸೈನ್ ಶಾಂಟೊ (ನಾಯಕ), ಲಿಟ್ಟನ್ ದಾಸ್ (ವಿಕೆಟ್ ಕೀಪರ್), ಪರ್ವೇಜ್ ಹೊಸೈನ್ ಎಮನ್, ತೌಹಿದ್ ಹೃದಯೋಯ್, ಜೇಕರ್ ಅಲಿ, ಮೆಹಿದಿ ಹಸನ್, ರಿಶಾದ್ ಹೊಸೈನ್, ಮಹಮ್ಮದುಲ್ಲಾ, ತಸ್ಕಿನ್ ಅಹ್ಮದ್, ಮುಸ್ತಾಫಿಜುರ್ ರೆಹಮಾನ್, ಶೋರಿಫುಲ್ ಇಸ್ಲಾಂ.


**ಮಯಾಂಕ್-ನಿತೀಶ್‌ಗೆ ಚೊಚ್ಚಲ ಪಂದ್ಯ**

**ಈ ಪಂದ್ಯದಲ್ಲಿ ಟಾಸ್ ಗೆದ್ದ ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು. ಇದರೊಂದಿಗೆ ಮಯಾಂಕ್ ಯಾದವ್-ನಿತೀಶ್ ರೆಡ್ಡಿಗೆ ಈ ಪಂದ್ಯದಲ್ಲಿ ಪದಾರ್ಪಣೆ ಮಾಡುವ ಅವಕಾಶ ಸಿಕ್ಕಿದೆ ಎಂದು ಹೇಳಿದ್ದಾರೆ. ಅದೇ ಹೊತ್ತಿಗೆ ವರುಣ್ ಚಕ್ರವರ್ತಿ ಕೂಡ ಈ ಪಂದ್ಯದಲ್ಲಿ ಆಡುವ ಅವಕಾಶ ಪಡೆದಿದ್ದಾರೆ. ಈ ಮೂಲಕ ವರುಣ್ ಚಕ್ರವರ್ತಿ 3 ವರ್ಷಗಳ ನಂತರ ಭಾರತ ತಂಡಕ್ಕೆ ಮರಳಿದ್ದಾರೆ. ಇದಕ್ಕೂ ಮೊದಲು, ಅವರು 2021 ರ ಟಿ20 ವಿಶ್ವಕಪ್‌ನಲ್ಲಿ ಟೀಂ ಇಂಡಿಯಾ ಪರ ತಮ್ಮ ಕೊನೆಯ ಪಂದ್ಯವನ್ನು ಆಡಿದ್ದರು.**

# ಉಳಿಸಿಕೊಳ್ಳುವ ಆಟಗಾರರನ್ನು ಹೆಸರಿಸಿದ ಆಕಾಶ್ ಚೋಪ್ರಾ

ಐಪಿಎಲ್ ಮೆಗಾ ಹರಾಜಿಗೂ ಮುನ್ನ ಪ್ರತಿ ಫ್ರಾಂಚೈಸಿ 6 ಆಟಗಾರರನ್ನು ರಿಟೈನ್ ಮಾಡಿಕೊಳ್ಳಬಹುದು. ಹೀಗೆ ರಿಟೈನ್ ಮಾಡಿಕೊಳ್ಳಲಾಗುವ ಆಟಗಾರರಿಗೆ ನಿರ್ದಿಷ್ಟ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಅದರಂತೆ ಆರು ಆಟಗಾರರನ್ನು ಉಳಿಸಿಕೊಳ್ಳಲು ಮುಂದಾದರೆ ಬರೋಬ್ಬರಿ 79 ಕೋಟಿ ರೂ. ಅನ್ನು ವ್ಯಯಿಸಬೇಕು.

ಇಲ್ಲಿ ಮೊದಲ ಆಟಗಾರನಿಗೆ 18 ಕೋಟಿ, ಎರಡನೇ ಆಟಗಾರನಿಗೆ 14 ಕೋಟಿ, ಮೂರನೇ ಆಟಗಾರನಿಗೆ 11 ಕೋಟಿ, ನಾಲ್ಕನೇ ಆಟಗಾರನಿಗೆ 18 ಕೋಟಿ, ಐದನೇ ಆಟಗಾರನಿಗೆ 14 ಕೋಟಿ ರೂ. ಹಾಗೂ ಆರನೇ ಆಟಗಾರನಿಗೆ 4 ಕೋಟಿ ಕೋಟಿ ನೀಡಬೇಕಾಗುತ್ತದೆ. ಹೀಗಾಗಿಯೇ ಈ ಬಾರಿ ಯಾವ ತಂಡ ಯಾರನ್ನು ಉಳಿಸಿಕೊಳ್ಳಲಿದೆ ಎಂಬ ಕುತೂಹಲ ಮೂಡಿದೆ. ಈ ಕುತೂಹಲದ ನಡುವೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಉಳಿಸಿಕೊಳ್ಳಲಿರುವ 6 ಆಟಗಾರರನ್ನು ಹೆಸರಿಸಿದ್ದಾರೆ ಭಾರತ ತಂಡದ ಮಾಜಿ ಆಟಗಾರ ಆಕಾಶ್ ಚೋಪ್ರಾ. ಟೀಮ್ ಇಂಡಿಯಾದ ಮಾಜಿ ಆಟಗಾರನ ಪ್ರಕಾರ ಆರ್‌ಸಿಬಿ 4+2 ಸೂತ್ರದೊಂದಿಗೆ ಒಟ್ಟು 6 ಆಟಗಾರರನ್ನು ರಿಟೈನ್ ಮಾಡಿಕೊಳ್ಳಲಿದೆ.



ಅದರಂತೆ ಆರ್‌ಸಿಬಿ ತಂಡದ ಮೊದಲ ರಿಟೈನ್ ವಿರಾಟ್ ಕೊಹ್ಲಿ ಆಗಲಿದ್ದಾರೆ. ಕೊಹ್ಲಿಯನ್ನು ಫಸ್ಟ್ ರಿಟೆನ್ಷನ್ ಆಯ್ಕೆಯಲ್ಲಿ ಆರ್‌ಸಿಬಿ ತಂಡದಲ್ಲೇ ಉಳಿಸಿಕೊಳ್ಳುವುದು ಖಚಿತ ಎಂದಿದ್ದಾರೆ ಆಕಾಶ್ ಚೋಪ್ರಾ. ಇನ್ನು ಆರ್‌ಸಿಬಿ ತಂಡದ 2ನೇ ಆಯ್ಕೆ ಕ್ಯಾಮರೋನ್ ಗ್ರೀನ್.

ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ರೀನ್ ಅವರನ್ನು ಆರ್‌ಸಿಬಿ ಬಿಡುಗಡೆ ಮಾಡುವ ಸಾಧ್ಯತೆಯಿಲ್ಲ. ಹೀಗಾಗಿ ಅವರನ್ನು 2ನೇ ರಿಟೆನ್ಷನ್ ಆಯ್ಕೆಯಲ್ಲಿ ತಂಡದಲ್ಲೇ ಉಳಿಸಿಕೊಳ್ಳಲಿದ್ದಾರೆ ಎಂದಿದ್ದಾರೆ. ಮೂರನೇ ರಿಟೆನ್ಷನ್‌ನಲ್ಲಿ ಯುವ ದಾಂಡಿಗ ರಜತ್ ಪಾಟಿದಾರ್ ಆಯ್ಕೆಯಾಗಲಿದ್ದಾರೆ. ಆರ್‌ಸಿಬಿ ಪರ ಅತ್ಯುತ್ತಮ ಪ್ರದರ್ಶನ ನೀಡಿರುವ ಕಾರಣ ಪಾಟಿದಾರ್ ಅವರನ್ನು ಬೆಂಗಳೂರು ಫ್ರಾಂಚೈಸಿ ಕೈ ಬಿಡುವ ಸಾಧ್ಯತೆಯಿಲ್ಲ ಎಂದು ಚೋಪ್ರಾ ಹೇಳಿದ್ದಾರೆ.

# ಮಹೇಂದ್ರ ಸಿಂಗ್ ಧೋನಿಗೆ ಕೇವಲ 4 ಕೋಟಿ ರೂ.

ಮಹೇಂದ್ರ ಸಿಂಗ್ ಧೋನಿ ಐಪಿಎಲ್ 2021 ರಲ್ಲಿ 15 ಕೋಟಿ ರೂ. ಪಡೆದಿದ್ದರು. ಇನ್ನು 2022 ರಲ್ಲಿ ಹರಾಜಿಗೂ ಮುನ್ನ 12 ಕೋಟಿ ರೂ.ನೊಂದಿಗೆ ಅವರು ಸಿಎಸ್‌ಕೆ ತಂಡದಲ್ಲಿ ರಿಟೈನ್ ಆಗಿದ್ದರು. ಇದೀಗ ಮೆಗಾ ಹರಾಜಿಗೂ ಮುನ್ನ ಅನ್ ಕ್ಯಾಪ್ಡ್ ಪಟ್ಟಿಯಲ್ಲಿ ಧೋನಿ ರಿಟೈನ್ ಆಗಲಿದ್ದಾರೆ ಎಂದು ತಿಳಿದು ಬಂದಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ IPL 2025) ಸೀಸನ್-18ರ ಮೆಗಾ ಹರಾಜಿಗಾಗಿ ಕೆಲ ನಿಯಮಗಳಲ್ಲಿ ಬದಲಾವಣೆ ತರಲಾಗಿದೆ. ಹೀಗೆ ಮಾಡಲಾದ ಬದಲಾವಣೆಗಳಲ್ಲಿ ಅನ್‌ಕ್ಯಾಪ್ಡ್ ರೂಲ್ಸ್ ಕೂಡ ಒಂದು. ಅಂದರೆ ಈ ಹಿಂದೆಯಿದ್ದ ಅನ್‌ಕ್ಯಾಪ್ಡ್ ಆಟಗಾರರ ನಿಯಮಗಳಲ್ಲಿ ಈ ಬಾರಿ ಮಾರ್ಪಾಡು ಮಾಡಲಾಗಿದೆ. ಈ ಹಿಂದೆ ರಾಷ್ಟ್ರೀಯ ತಂಡದ ಪರ ಆಡದ ಆಟಗಾರರನ್ನು ಮಾತ್ರ ಅನ್‌ಕ್ಯಾಪ್ಡ್ ಪಟ್ಟಿಯಲ್ಲಿ ಆಯ್ಕೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕಾಣಿಸಿಕೊಂಡು 5 ವರ್ಷ ಕಳೆದಿರುವ ಆಟಗಾರರನ್ನು ಸಹ ಅನ್ ಕ್ಯಾಪ್ಡ್ ಆಟಗಾರರ ಪಟ್ಟಿಗೆ ಪರಿಗಣಿಸಬಹುದು.

ಇಂತಹದೊಂದು ನಿಯಮವು 2008 ರಲ್ಲಿ ಜಾರಿಯಲ್ಲಿತ್ತು. ಆದರೆ ಆ ಸಂದರ್ಭಗಳಲ್ಲಿ ಈ ನಿಯಮ ಬಳಕೆ ಬರದಿದ್ದ ಕಾರಣ ಅದನ್ನು ತೆಗೆದು ಹಾಕಲಾಗಿತ್ತು. ಇದೀಗ ಐಪಿಎಲ್ ಮೆಗಾ ಹರಾಜಿಗೂ ಮುನ್ನ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯ ಕೋರಿಕೆಯ ಮೇರೆಗೆ ಈ ನಿಯಮವನ್ನು ಮತ್ತೆ ಜಾರಿಗೊಳಿಸಲಾಗಿದೆ. ಮಹೇಂದ್ರ ಸಿಂಗ್ ಧೋನಿಯನ್ನು ಕಡಿಮೆ ಮೊತ್ತದಲ್ಲಿ ರಿಟೈನ್ ಮಾಡಿಕೊಳ್ಳಲು ಸಿಎಸ್‌ಕೆ ಫ್ರಾಂಚೈಸಿಯು ಈ ನಿಯಮವನ್ನು ಜಾರಿಗೊಳಿಸುವಂತೆ ಆಗ್ರಹಿಸಿದೆ. ಏಕೆಂದರೆ ಧೋನಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿ 5 ವರ್ಷ ಕಳೆದಿದೆ. ಇದೀಗ ಅವರನ್ನು ಅನ್‌ಕ್ಯಾಪ್ಡ್ ಆಟಗಾರರ ಪಟ್ಟಿಗೆ ಪರಿಗಣಿಸಬಹುದು. ಈ ಮೂಲಕ ಕೇವಲ 4 ಕೋಟಿ ರೂ.ಗೆ ರಿಟೈನ್ ಮಾಡಿಕೊಳ್ಳಬಹುದು.

ಅದರಂತೆ ಐಪಿಎಲ್ ಮೆಗಾ ಹರಾಜಿಗೂ ಮುನ್ನ ಮಹೇಂದ್ರ ಸಿಂಗ್ ಧೋನಿಯನ್ನು 4 ಕೋಟಿ ರೂ.ಗೆ ರಿಟೈನ್ ಮಾಡಿಕೊಂಡರೆ, ಸಿಎಸ್‌ಕೆ ಫ್ರಾಂಚೈಸಿಯು ಹೆಚ್ಚಿನ ಹರಾಜು ಮೊತ್ತವನ್ನು ಉಳಿಸಿಕೊಳ್ಳಬಹುದು. ಹೀಗಾಗಿಯೇ ಈ ಬಾರಿ ಧೋನಿ ಅನ್‌ಕ್ಯಾಪ್ಡ್ ಆಟಗಾರರ ಪಟ್ಟಿಯಲ್ಲಿ ರಿಟೈನ್ ಆಗುವುದು ಖಚಿತ ಎನ್ನಲಾಗಿದೆ. ಈ ಬಗ್ಗೆ ಚರ್ಚಿಸಲೆಂದೇ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯ ಮಾಲೀಕರು ಇದೇ ತಿಂಗಳು ಸಭೆ ಕರೆದಿದ್ದಾರೆ. ಈ ಸಭೆಯಲ್ಲಿ ಧೋನಿ ಕೂಡ ಭಾಗವಹಿಸಲಿದ್ದಾರೆ.



# ಟಿ20 ವಿಶ್ವಕಪ್‌ನಲ್ಲಿ ಪಾಕ್ ವಿರುದ್ಧ ದಾಖಲೆಯ ಗೆಲುವು ದಾಖಲಿಸಿದ ಟೀಂ ಇಂಡಿಯಾ



2024ರ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಅಂತಿಮವಾಗಿ ಟೀಂ ಇಂಡಿಯಾ ತನ್ನ ಗೆಲುವಿನ ಖಾತೆ ತೆರೆದಿದೆ. ಪಂದ್ಯಾವಳಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಹೀನಾಯ ಸೋಲನುಭವಿಸಿದ್ದ ಟೀಂ ಇಂಡಿಯಾ ತನ್ನ ಎರಡನೇ ಪಂದ್ಯದಲ್ಲಿ ಕಮ್ ಬ್ಯಾಕ್ ಮಾಡಿದ್ದು, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು 6 ವಿಕೆಟ್‌ಗಳಿಂದ ಸೋಲಿಸಿದೆ. ಈ ಗೆಲುವಿನೊಂದಿಗೆ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಅಧಿಕ ಪಂದ್ಯಗಳನ್ನು ಗೆದ್ದ ತಂಡ ಎಂಬ ಹೆಗ್ಗಳಿಕೆ ಟೀಂ ಇಂಡಿಯಾ ಪಾತ್ರವಾಗಿದೆ. ಇದುವರೆಗೆ ಟಿ20 ವಿಶ್ವಕಪ್‌ನಲ್ಲಿ ಪಾಕ್ ವಿರುದ್ಧ 8 ಪಂದ್ಯಗಳನ್ನು ಆಡಿರುವ ಭಾರತ 6 ಪಂದ್ಯಗಳಲ್ಲಿ ಗೆದ್ದು, 2 ಪಂದ್ಯಗಳಲ್ಲಿ ಸೋಲು ಕಂಡಿದೆ.

ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ ತಂಡ ಭಾರತದ ಬೌಲರ್‌ಗಳ ಸಾಂಘೀಕ ದಾಳಿಗೆ ತತ್ತರಿಸಿ ಕೇವಲ 105 ರನ್ ಗಳಿಸಲಷ್ಟೇ ಶಕ್ತವಾಯಿತು. ಆದಾಗ್ಯೂ, ಈ ಅಲ್ಪ ಗುರಿ ಬೆನ್ನಟ್ಟಿದ್ದ ಭಾರತ ತಂಡಕ್ಕೆ ಮತ್ತೊಮ್ಮೆ ಉತ್ತಮ ಆಂಭ ಸಿಗಲಿಲ್ಲ. ಆದರೆ ನಾಯಕಿ ಹರ್ಮನ್‌ಪ್ರೀತ್ ಕೌರ್ ಅತ್ಯುತ್ತಮ ಇನ್ನಿಂಗ್ಸ್ ಆಡಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಇದರೊಂದಿಗೆ ಟೀಂ ಇಂಡಿಯಾ ಸೆಮಿಫೈನಲ್ ತಲುಪುವ ಭರವಸೆಯನ್ನು ಇನ್ನು ಜೀವಂತವಾಗಿ ಉಳಿಸಿಕೊಂಡಿದೆ.

ಭಾರತಕ್ಕೆ ಮತ್ತೆ ಕಳಪೆ ಆರಂಭ: ಪಾಕ್ ನೀಡಿದ 105 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ಮಹಿಳಾ ತಂಡ ಮತ್ತೊಮ್ಮೆ ಉತ್ತಮ ಆರಂಭ ಪಡೆಯಲಿಲ್ಲ. ಮತ್ತೊಮ್ಮೆ ನಿರಾಸೆ ಮೂಡಿಸಿದ ಸ್ಮೃತಿ ಮಂಧಾನ ಕೇವಲ ಏಳು ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಇದಾದ ನಂತರ ಬಂದ ಜೆಮಿಮಾ, ಶಫಾಲಿ ಜೊತೆಗೂಡಿ ಎರಡನೇ ವಿಕೆಟ್‌ಗೆ 43 ರನ್‌ಗಳ ಜೊತೆಯಾಟ ಹಂಚಿಕೊಂಡರು. ಈ ವೇಳೆ ಶಫಾಲಿ 32 ರನ್‌ಗಳ ಇನ್ನಿಂಗ್ಸ್ ಆಡಿ ವಿಕೆಟ್ ಒಪ್ಪಿಸಿದರು. ಅವರ ಹಿಂದೆ ಜೆಮಿಮಾ ಕೂಡ 23 ರನ್‌ಗಳ ಇನ್ನಿಂಗ್ಸ್ ಆಡಿ ಬ್ಯಾಟ್ ಎತ್ತಿಟ್ಟರು. ಆ ಬಳಿಕ ಇನ್ನಿಂಗ್ಸ್ ಜವಬ್ದಾರಿ ಹೊತ್ತುಕೊಂಡ ನಾಯಕಿ ಹರ್ಮನ್‌ಪ್ರೀತ್ ಸಿಂಗ್ ಪಾಕಿಸ್ತಾನದ ಬೌಲರ್‌ಗಳ ಲೆಕ್ಕಾಚಾರವನ್ನು ಬುಡಮೇಲು ಮಾಡಿದರು. 29 ರನ್‌ಗಳ ಗೆಲುವಿನ ಇನ್ನಿಂಗ್ಸ್ ಆಡುವ ಮೂಲಕ ಹರ್ಮನ್‌ಪ್ರೀತ್ ತಂಡವನ್ನು ಗೆಲುವಿನ ಹತ್ತಿರಕ್ಕೆ ಕೊಂಡೊಯ್ದರು. ಕೊನೆಯದಾಗಿ ದೀಪ್ತಿ ಶರ್ಮಾ ಮತ್ತು ಸಜೀವನ್ ಸಜ್ನಾ ಕ್ರಮವಾಗಿ ಅಜೇಯ ಏಳು ಮತ್ತು ನಾಲ್ಕು ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಬಾಂಗ್ಲಾದೇಶ ಪರ ಫಾತಿಮಾ ಸನಾ ಎರಡು ಹಾಗೂ ಸಾದಿಯಾ ಮತ್ತು ಒಮೈಮಾ ತಲಾ ಒಂದು ವಿಕೆಟ್ ಪಡೆದರು.

ಪಾಕಿಸ್ತಾನಕ್ಕೂ ಕಳಪೆ ಆರಂಭ: ಇದಕ್ಕೂ ಮೊದಲು ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಮೊದಲ ಓವರ್‌ನಲ್ಲೇ ರೇಣುಕಾ ಸಿಂಗ್, ಗುಲ್ ಫಿರೋಜಾ ಅವರನ್ನು ಶೂನ್ಯಕ್ಕೆ ಪೆವಿಲಿಯನ್‌ಗಟ್ಟಿದರು. ನಂತರ ಎರಡನೇ ವಿಕೆಟ್‌ಗೆ 24 ರನ್‌ಗಳ ಜೊತೆಯಾಟ ಕಂಡುಬಂತು ಈ ವೇಳೆ ದಾಳಿಗಿಳಿದ ದೀಪ್ತಿ, ಸಿದ್ರಾ ಅಮೀನ್ ಅವರನ್ನು 8 ರನ್‌ಗಳಿಗೆ ಬಲಿ ಪಡೆದರು. ಆ ನಂತರವೂ ನಿಯಮಿತ ಅಂತರದಲ್ಲಿ ಪಾಕ್ ತಂಡದ ವಿಕೆಟ್‌ಗಳು ಪತನವಾಗುತ್ತಲೇ ಇದ್ದವು.

ಆದರೆ ತಂಡದ ಪರ ಏಕಾಂಗಿ ಹೋರಾಟ ನಡೆಸಿದ ಮಾಜಿ ನಾಯಕಿ ನಿದಾದರ್ ಗರಿಷ್ಠ 28 ರನ್‌ಗಳ ಇನ್ನಿಂಗ್ಸ್ ಆಡಿದರು. ನಿದಾ ಅವರು ವಿಕೆಟ್‌ನಲ್ಲಿ ನಿಲ್ಲದೆ ಹೋಗಿದ್ದರೆ, ಪಾಕ್ ತಂಡ ಶತಕದ ಗಡಿಯನ್ನೂ ಸಹ ದಾಟುತ್ತಿರಲಿಲ್ಲ.

**ಮಿಂಚಿದ ಅರುಂಧತಿ ಶ್ರೇಯಾಂಕ**

**ಟೀಂ ಇಂಡಿಯಾ ಪರ ಬೌಲಿಂಗ್‌ನಲ್ಲಿ ಮಿಂಚಿದ ಅರುಂಧತಿ ರೆಡ್ಡಿ 4 ಓವರ್‌ಗಳಲ್ಲಿ 19 ರನ್ ನೀಡಿ ಪ್ರಮುಖ 3 ವಿಕೆಟ್ ಕಬಳಿಸಿದರೆ, ಪಂದ್ಯದುದ್ದಕ್ಕೂ ರನ್‌ಗಳಿಗೆ ಕಡಿವಾಣ ಹಾಕುವ ಕೆಲಸ ಮಾಡಿದ ಕನ್ನಡತಿ ಶ್ರೇಯಾಂಕ ಪಾಟೀಲ್ ತಮ್ಮ ಖೋಟಾದ 4 ಓವರ್‌ಗಳಲ್ಲಿ ಕೇವಲ 12 ರನ್ ನೀಡಿ 2 ವಿಕೆಟ್ ಕಬಳಿಸಿದರು. ಇದರಲ್ಲಿ 1 ಮೇಡನ್ ಓವರ್ ಕೂಡ ಸೇರಿತ್ತು.**

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966